ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 101

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಶುಕ್ರವಾರ: 27-03-2026

## ಪತ್ರಿಕೆಗಳಲ್ಲಿ ದಾಖಲಾದ ಕುಂದುಕೊರತೆಗಳ ಉಲ್ಲೇಖಿಸಿ ಅಧಿಕಾರಿಗಳಿಂದ ವರದಿ ಕೇಳಿದ ಆಯೋಗ

ಧೈರ್ಯದ ದಾರಿ

**ರಾಯಚೂರು ಮಾ.26–**"ಚಿಕಿತ್ಸೆ ಫಲಿಸದೇ ಬಾಣಂತಿ, ಮಗು ಸಾವು..", "ಕಲುಷಿತ ಆಹಾರ ಸೇವಿಸಿ ವಸತಿ ನಿಲಯದ ಮಕ್ಕಳು ಅಸ್ವಸ್ಥ"..., "ಅಮಾಯಕರ ಬಲಿ ಪಡೆದ ರಸ್ತೆ ಗುಂಡಿ".. ಸೇರಿದಂತೆ ನಾನಾ ಕುಂದುಕೊರತೆಗಳ ಪತ್ರಿಕಾ ವರದಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಹಾಗೂ ಆಯೋಗದ ನ್ಯಾಯಿಕ ಸದಸ್ಯರಾದ ಎಸ್.ಕೆ ವಂಟಿಗೋಡಿ ಅವರು ವರದಿ ಕೇಳಿದರು.

ಮಾರ್ಚ 26ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ ಹಾಗೂ ಸಾರ್ವಜನಿಕ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಸಭೆ ನಡೆಸಿದ ಅಧ್ಯಕ್ಷರು ಹಾಗು ಸದಸ್ಯರು, ಹಲವಾರು ದಿನಪತ್ರಿಕೆಗಳಲ್ಲಿ 2022ರಿಂದ ಇದುವರೆಗೆ ವಿವಿಧ ದಿನಪತ್ರಿಕೆಗಳಲ್ಲಿ ವರದಿಯಾದ ಕುಂದುಕೊರತೆಗಳನ್ನು ಉಲ್ಲೇಖಿಸಿ ಅಧಿಕಾರಿಗಳಿಂದ ವರದಿ ಕೇಳಿದರು.ಅರಕೇರಾ ವಸತಿ ನಿಲಯದ ಅವ್ಯವಸ್ಥೆಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಸಂಬಂಧಪಟ್ಟ ಅಧಿಕಾರಿ ಮತ್ತು ವಾರ್ಡನಗೆ ನೋಟೀಸ್ ಕೊಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.ದೇವದುರ್ಗ ತಾಲೂಕಿನ ಮನೆಯೊಂದರಲ್ಲಿ 80ಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿಯ ಅಕ್ಕಿ ಚೀಲಗಳು ಪತ್ರಿಕಾ ವರದಿಯ ಬಗ್ಗೆ ಕೇಳಿದರು. ಇಲಾಖೆಯಿಂದ ಎಚ್ಚರಿಕೆಯ ನೋಟಿಸ್ ನೀಡಿದ್ದೇವೆ ಎಂದು ಆಹಾರ ಇಲಾಖೆಯ ಅಧಿಕಾರಿಗಳು ತಿಳಿಸಿದರು.ಲಿಂಗಸೂರ ಪುರಸಭೆ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಹಾವಳಿ ವರದಿಯ ಬಗ್ಗೆ ಕೇಳಿದರು. ಘಟನೆಗೆ ಸಂಬಂಧಿಸಿದಂತೆ ಸಂತ್ರಸ್ಥರಿಗೆ 5 ಲಕ್ಷ ಪರಿಹಾರ ನೀಡಿದ್ದೇವೆ ಎಂದು ಪುರಸಭೆ ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಆರ್‌ಟಿಪಿಎಸ್‌ನಲ್ಲಿ ಕರೆಂಟ್ ಶಾಖ್ ಕಾರ್ಮಿಕ ಸಾವು ಪ್ರಕರಣದಲ್ಲಿ ಪರಿಹಾರ ನೀಡಿದ್ದೇವೆ ಎಂದು ಆಯೋಗಕ್ಕೆ ಅಧಿಕಾರಿಗಳು ಮಾಹಿತಿ ನೀಡಿದರು.ಕಲುಷಿತ ನೀರು ಸೇವಿಸಿ ಸಿಂದನೂರ ತಾಲೂಕಿನ ಗ್ರಾಮವೊಂದರಲ್ಲಿ 40 ಜನ ಅಸ್ವಸ್ಥ ಘಟನೆಯ ಬಗ್ಗೆ ಸದಸ್ಯರು ಕೇಳಿದರು. ಗ್ರಾಮದಲ್ಲಿ ಶುಚಿತ್ವ ಕಾರ್ಯ ನಡೆಸಿದ್ದೇವೆ ಎಂದು ಅಧಿಕಾರಿಗಳು ಪ್ರತಿಕ್ರಿಯಿಸಿದರು.ರಾಯಚೂರು ಜಿಲ್ಲೆಯಲ್ಲಿ ಬಾಲ ಗರ್ಭಿಣಿಯರು" ಎಂಬ ಪತ್ರಿಕಾ ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದು, ಎಲ್ಲ ತಾಲೂಕುಗಳಲ್ಲಿ ಕಿಶೋರಿ ತರಬೇತಿ ಕೇಂದ್ರ ತೆರೆದು ಅಲ್ಲಿ ಜಾಗೃತಿ ಕಾರ್ಯಕ್ರಮ, ಚೈಲ್ಡ್ ಮ್ಯಾರೇಜ್ ತಡೆಗೆ ಜಾಗೃತಿ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಪ್ರತಿಕ್ರಿಯಿಸಿದರು.

**ಸ್ಮಶಾನಕ್ಕೆ ಸ್ಥಳ ಗುರುತಿಸಲು ಸೂಚನೆ:** ಸಿಂಧನೂರ ತಾಲೂಕಿನ ಗ್ರಾಮವೊಂದರಲ್ಲಿ ಸ್ಮಶಾನ ಇಲ್ಲ ಎಂಬ ಪತ್ರಿಕಾ ವರದಿ ಉಲ್ಲೇಖಿಸಿದ ಆಯೋಗದ ಸದಸ್ಯರು, ಪ್ರತಿ ಗ್ರಾಮದಲ್ಲಿ ಸ್ಮಶಾನಕ್ಕೆ ಸ್ಥಳ ಗುರುತಿಸಿ ಕ್ರಮವಹಿಸಬೇಕು ಎಂದು ಸಹಾಯಕ ಆಯುಕ್ತರಿಗೆ ನಿರ್ದೇಶನ ನೀಡಿದರು.

**ಸುಮೊಟೊ ಕೇಸ್ ದಾಖಲು:** ಜಿಲ್ಲೆಯಲ್ಲಿ ನಾಲ್ವರು ಬಾಣಂತಿಯರ ಸಾವಿಗೀಡಾದ ಬಗೆಗಿನ ಪತ್ರಿಕಾ ವರದಿ ಆಧರಿಸಿ ಸುಮೊಟೊ ಕೇಸ್ ದಾಖಲಿಸಿದ ಬಗ್ಗೆ ತಿಳಿಸಿದ ಅಧ್ಯಕ್ಷರು, ಆರೋಗ್ಯ ಇಲಾಖೆಯಿಂದ ವಿವರಣೆ ಕೇಳಿದರು. ದೇವದುರ್ಗ ತಾಲೂಕಿನಿಂದ ವರದಿಯಾದ ಬಾಣಂತಿ ಮತ್ತು ಶಿಶು ಸಾವಿನ ಬಗ್ಗೆ ಕೇಳಿದರು. ಈ ಬಗ್ಗೆ ನಿರ್ಲಕ್ಷ್ಯ ಆಗಿಲ್ಲ

**ಎಂದು ಆರೋಗ್ಯ ಅಧಿಕಾರಿಗಳು ಪ್ರತಿಕ್ರಿಯಿಸಿದರು. ಶಾಲಾ ಮುಖ್ಯ**



**ಶಿಕ್ಷಕ ಅಮಾನತು:** ಸಿಂಧನೂರು ತಾಲೂಕಿನ ಕುರಕುಂದ ಶಾಲೆಯಲ್ಲಿ ವಿದ್ಯುತ್ ಹರಿದು ಬಾಲಕಿ ಸಾವು ದುರ್ಘಟನೆ ಸಭೆಯಲ್ಲಿ ಚರ್ಚೆಗೆ ಬಂದಿತು. ಈ ಸಂಬಂಧ ಶಾಲಾ ಮುಖ್ಯ ಶಿಕ್ಷಕರ ಮೇಲೆ ಎಫ್ ಐಆರ್ ದಾಖಲಾಗಿ, ಅಮಾನತು ಮಾಡಲಾಗಿದೆ. ಜೆಸ್ಕಾಂ ಲೋಪವಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.ಗ್ರಾಮ ಸೇವಕ ಅಮಾನತು: ಸುಳ್ಳು ದಾಖಲೆ ಸೃಷ್ಟಿಸಿ ಲೋಪ ಎಸಗಿದ ಸಿರವಾರ ಹೋಬಳಿಯ ಗ್ರಾಮ ಸೇವಕ ಸಿದ್ದಪ್ಪ ಎಂಬುವರನ್ನು ಅಮಾನತು ಮಾಡಲಾಗಿದೆ ಎಂದು ಆಯೋಗಕ್ಕೆ ಅಧಿಕಾರಿಗಳು ತಿಳಿಸಿದರು.

**ವೈದ್ಯರ ಮೇಲೆ ಕ್ರಮಕ್ಕೆ ಸೂಚನೆ:** ದೇವದುರ್ಗ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಸಕಾಲಕ್ಕೆ ಚಿಕಿತ್ಸೆ ಸಿಗದೇ ಬಾಣಂತಿ ಮತ್ತು ಮಗು ಸಾವಿನ ಬಗ್ಗೆ ವರದಿ ಕೇಳಿದ ಅಧ್ಯಕ್ಷರು, ವೈದ್ಯರ ಲೋಪದ ಬಗ್ಗೆಯೂ ಪರಿಶೀಲಿಸಬೇಕು ಎಂದರು. ಇಬ್ಬರು ನರ್ಸಗಳಿಗೆ ನೋಟೀಸ್ ನೀಡಿದ್ದೇವೆ ಎಂದು ಡಿಎಚ್‌ಓ ತಿಳಿಸಿದರು.

**ಎಕರೆ ಜಮೀನು ಖರೀದಿ:** ಮಸ್ಕಿ ನಗರದ ಮನೆ ಅಂಗಳದಲ್ಲಿ ಶವಸಂಸ್ಕಾರ ಸುದ್ದಿಗೆ ಸದಸ್ಯರು ವರದಿ ಕೇಳಿದರು. ಸ್ಥಳಕ್ಕೆ ಭೇಟಿ ಮಾಡಿದ್ದೇವೆ.

ಎಕರೆ ಜಾಗ ಖರೀದಿಸಿ ಪರಿಹಾರ ಕಲ್ಪಿಸಿದ್ದೇವೆ ಎಂದು ಮಸ್ಕಿ ತಹಸೀಲ್ದಾರ ತಿಳಿಸಿದರು.ಹಟ್ಟಿಗೋಲ್ಡ್ ಮೈನ್ ಆಸ್ಪತ್ರೆ ದುಸ್ಥಿತಿ: ವಿದ್ಯುತ್ ವ್ಯತ್ಯಯ ವೇಳೆಯಲ್ಲಿ ಮೊಬೈಲ್ ಟಾರ್ಚ ಬೆಳಕಿನಲ್ಲಿ ಹಟ್ಟಿಗೋಲ್ಡ್ ಮೈನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಮಾಡಲಾಗಿದೆ ಎನ್ನುವ ಪತ್ರಿಕಾ ವರದಿಗೆ ಅಧ್ಯಕ್ಷರು ವಿವರಣೆ ಕೇಳಿದರು. ಘಟನೆಯ ಬಳಿಕ ಸಮರ್ಪಕ ವಿದ್ಯುತ್ ಪೂರೈಕೆಗೆ ಆಸ್ಪತ್ರೆಯಲ್ಲಿ ಏರ್ಪಾಡು ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಸಕಾಲಕ್ಕೆ ವರದಿ ಸಲ್ಲಿಸಲು ನಿರ್ದೇಶನ: ರಾಯಚೂರ ಜಿಲ್ಲೆಯಲ್ಲಿ 59 ಪ್ರಕರಣಗಳ ವಿಚಾರಣೆ ಮಾಡಲಾಗಿದೆ ಎಂದು ತಿಳಿಸಿದ ಅಧ್ಯಕ್ಷರು, ಸಂಬಂಧಿಸಿದ ಇಲಾಖೆಗಳು ಸಕಾಲಕ್ಕೆ ಆಯೋಗಕ್ಕೆ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

## ರಾಯಚೂರು ಜಿಲ್ಲಾ ಪೊಲೀಸ್ ಮತ್ತು ಸಿರಿವಾರ ಪೊಲೀಸ್ ಠಾಣೆ ಪ್ರಕಟಣೆ: ಇಂಧನ ಕೊರತೆ ವದಂತಿ ನಂಬಬೇಡಿ




ಧೈರ್ಯದ ದಾರಿ

**ಸಿರಿವಾರ:** ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂಬ ವದಂತಿಗಳ ಹಿನ್ನೆಲೆಯಲ್ಲಿ, ರಾಯಚೂರು ಜಿಲ್ಲಾ ಪೊಲೀಸ್ ಮತ್ತು ಸಿರಿವಾರ ಪೊಲೀಸ್ ಠಾಣೆಯ ವತಿಯಿಂದ ಸಾರ್ವಜನಿಕರಿಗೆ ಪ್ರಮುಖ ಸುರಕ್ಷತಾ ಸಲಹೆಗಳನ್ನು ನೀಡಲಾಗಿದೆ.

ಪೊಲೀಸ್ ಇಲಾಖೆಯ ಪ್ರಮುಖ ಸೂಚನೆಗಳು:

**ಸಮರ್ಪಕ ದಾಸ್ತಾನು ಲಭ್ಯ:** ದೇಶಾದ್ಯಂತ ಹಾಗೂ ಜಿಲ್ಲೆಯಾದ್ಯಂತ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಸಾಕಷ್ಟು ಪ್ರಮಾಣದ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಲಭ್ಯವಿದೆ. ಸಾರ್ವಜನಿಕರು ಯಾವುದೇ ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ.

ಕ್ಯಾನ್‌ಗಳಲ್ಲಿ ಇಂಧನ ಸಂಗ್ರಹಣೆ ಬೇಡ: ಸುರಕ್ಷತೆಯ ದೃಷ್ಟಿಯಿಂದ ಗ್ರಾಹಕರು ಪ್ಲಾಸ್ಟಿಕ್ ಕ್ಯಾನ್‌ಗಳು, ಬಾಟಲಿಗಳು ಅಥವಾ ಯಾವುದೇ ಅಸುರಕ್ಷಿತ ಪಾತ್ರೆಗಳಲ್ಲಿ ಇಂಧನವನ್ನು ಪಡೆದುಕೊಂಡು ಹೋಗಬಾರದು.


**ಅಪಾಯಕಾರಿ ಸಂಗ್ರಹಣೆ :** ಮನೆಗಳಲ್ಲಿ ಅಥವಾ ಜನನಿಬಿಡ ಪ್ರದೇಶಗಳಲ್ಲಿ ಅಸುರಕ್ಷಿತವಾಗಿ ಇಂಧನವನ್ನು ಸಂಗ್ರಹಿಸಿಡುವುದು ಬೆಂಕಿ ಅನಾಹುತಗಳಿಗೆ ಕಾರಣವಾಗಬಹುದು. ಇಂತಹ ಕೃತ್ಯಗಳು ಕಂಡುಬಂದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು.

**ವದಂತಿಗಳಿಗೆ ಕಿವಿಗೊಡಬೇಡಿ:** ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುಳ್ಳು ಸುದ್ದಿಗಳ ಬಗ್ಗೆ ಎಚ್ಚರಿಕೆ ವಹಿಸಿ ಮತ್ತು ಅನಗತ್ಯವಾಗಿ ಪೆಟ್ರೋಲ್ ಬಂಕ್‌ಗಳಲ್ಲಿ ಜನದಟ್ಟಣೆ ಉಂಟುಮಾಡಬೇಡಿ.

"ಸಾರ್ವಜನಿಕರು ಶಾಂತಿಯುತವಾಗಿ ವರ್ತಿಸಿ, ಪೆಟ್ರೋಲ್ ಬಂಕ್ ಸಿಬ್ಬಂದಿ ಹಾಗೂ ಪೊಲೀಸ್ ಇಲಾಖೆಯೊಂದಿಗೆ ಸಹಕರಿಸಬೇಕು. ನಿಯಮ ಮೀರಿ ಅಸುರಕ್ಷಿತ ಪಾತ್ರೆಗಳಲ್ಲಿ ಇಂಧನ ವಿತರಿಸುವ ಬಂಕ್ ಮಾಲೀಕರ ಮೇಲೂ ನಿಗಾ ಇಡಲಾಗುವುದು."

–ಸಿರವಾರ ಪೊಲೀಸ್ ಇಲಾಖೆ.

## ಜಾನೆಕಲ್ ಗ್ರಾಮದಲ್ಲಿಯೇ ಜೋಳ ಖರೀದಿ ಕೇಂದ್ರವನ್ನು ಪ್ರಾರಂಭಿಸಿ: ಸೂಗೂರಯ್ಯ ಆರ್.ಎಸ್.ಮಠ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದಿಂದ ತಹಶೀಲ್ದಾರ್ ರವರಿಗೆ ಗ್ರೇಡ್–2 ತಹಸೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮನವಿ ಸಲ್ಲಿಸಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಸೂಗೂರಯ್ಯ ಆರ್.ಎಸ್.ಮಠ ಮಾತನಾಡಿ ಸರ್ಕಾರವು ರೈತರಿಂದ ಬೆಂಬಲ ಬೆಲೆ ಅಡಿಯಲ್ಲಿ ಜೋಳವನ್ನು ಖರೀದಿ ಮಾಡುವುದಕ್ಕಾಗಿ ತಾಲೂಕಿನ ಜಾನೆಕಲ್ ಗ್ರಾಮದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಜೋಳ ಖರೀದಿ ಕೇಂದ್ರಕ್ಕೆ ಅವಕಾಶ ನೀಡಿದ್ದು ಅದರೆ ಜಾನೆಕಲ್ ಗ್ರಾಮದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ವತಿಯಿಂದ ಜಾನೆಕಲ್ ಗ್ರಾಮದಲ್ಲಿ ಜೋಳ ಖರೀದಿ ಕೇಂದ್ರವನ್ನು ಇದುವರೆಗೂ ಕೂಡ ಪ್ರಾರಂಭವಾಡಿರುವುದಿಲ್ಲ ಈ ಕುರಿತು ಸಹಕಾರಿಯು ಅಧಿಕಾರಿಗಳಿಗೆ ರೈತರು ಕೇಳಿದರೆ ಗ್ರಾಮದಿಂದ 5 ಕಿ.ಮಿ.ದೂರ ಇರುವ ಅಮರಾವತಿ ಕ್ಯಾಂಪಿನಲ್ಲಿ ಖರೀದಿ ಕೇಂದ್ರ ಮಾಡಿದ್ದು ರೈತರು ಅಮರಾವತಿ ಕ್ಯಾಂಪಿಗೆ ತಮ್ಮ ಜೋಳವನ್ನು ತರುವಂತೆ ಹೇಳುತ್ತಿರುವುದರಿಂದ ರೈತರಿಗೆ ಸಾಗಣಿಕೆ ವೆಚ್ಚ ಹೆಚ್ಚಾಗುತ್ತದೆ ಹಾಗೂ ಅಮರಾವತಿ ಕ್ಯಾಂಪಿನಲ್ಲಿನ ಖರೀದಿ ಕೇಂದ್ರದಲ್ಲಿ ರೈತರಿಗೆ ಯಾವುದೆ ಸೌಲಭ್ಯಗಳಿರುವುದಿಲ್ಲ ಅದ್ದರಿಂದ ಅನಧಿಕೃತವಾಗಿರುವ ಅಮರಾವತಿ ಕ್ಯಾಂಪಿನಲ್ಲಿನ ಖರೀದಿ ಕೇಂದ್ರವನ್ನು ಮುಚ್ಚಿ ಜಾನೆಕಲ್ ಗ್ರಾಮದಲ್ಲಿಯೇ ಜೋಳಖರೀದಿ ಕೇಂದ್ರವನ್ನು ಪ್ರಾರಂಭಿಸಿದಲ್ಲಿ ರೈತರಿಗೆ ಅನುಕೂಲವಾಗುವುದರಿಂದ ತಹಶೀಲ್ದಾರ್ ರವರು ಜಾನೆಕಲ್ ಗ್ರಾಮದಲ್ಲಿ ಜೋಳ ಖರೀದಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ ರೈತರಿಗೆ ಜಾನೆಕಲ್ ಗ್ರಾಮದಲ್ಲಿಯೇ ಖರೀದಿ ಕೇಂದ್ರ ಪ್ರಾರಂಭಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಹಾಗೂ ಮುಂಗಾರಿನಲ್ಲಿ ಜೋಳ ಬೆಳೆಯದೆ ಇರುವ ಕೇಲವು ರೈತರ ಜಮೀನುಗಳನ್ನು ಜಿ.ಪಿ.ಎಸ್. ಮಾಡಿರುವುದರಿಂದ ಅರ್ಹ ರೈತರಿಗೆ ಅನಾನುಕೂಲ ಉಂಟಾಗಿರುವುದರಿಂದ ಕೂಡಲೆ ಜೋಳ ಬೆಳೆದ ಎಲ್ಲಾ ರೈತರ ಜಮೀನುಗಳನ್ನು ಸರಿಯಾಗಿ ಸಮೀಕ್ಷೆ ಮಾಡಿ ಸುಳ್ಳು ಬೆಳೆ ದಾಖಲಿಸಿದ ರೈತರ ಜಮೀನುಗಳ ನೊಂದಾಣಿಯನ್ನು ರದ್ದು ಪಡಿಸಬೇಕು ಸರಿಯಾಗಿ ಬೆಳೆ ಸಮೀಕ್ಷೆ ಮಾಡದೆ ಇರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಹಾಲಿ ಇರುವ 15 ಕ್ವಿಂಟಾಲ್ ಜೋಳ ಖರೀದಿಯನ್ನು 25 ಕ್ವಿಂಟಲ್ ವರೆಗೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಬಸವರಾಜ ಮಲಿಪಾಟೀಲ್, ತಿಮ್ಮಯ್ಯ ಕಾವಲಿ, ಯು.ಅಮರೇಶ ಕುಂಬಾರ, ವೀರೇಶ ಮೇಟಿ, ಬಸವರಾಜ ಕುಮ್ಮದಾಳ್, ದೇವರಾಜ ಹಿರೇಮಠ, ಬಸವರಾಜ ಉಪ್ಪರ್, ಕಾಂತಪ್ಪ ಗೌಡ, ಹನುಮಂತ ಇಳಿಗೇರ,ಚಾಮರಸ್ ಜಾನೆಕಲ್, ಶಂಭುನಗೌಡ,ಶರಣಬಸವನಾಯಕ,ಚನ್ನಬಸವ ಉಪ್ಪರ್,ಸೇರಿದಂತೆ ಇನ್ನಿತರರು ಇದ್ದರು.

## ಹೆಣ್ಣೆಂದರೆ ಶೋಕ ಅಲ್ಲ ಹೆಣ್ಣೆಂದರೆ ಸಂಸ್ಕೃತಿ : ಶ್ರೀದೇವಿ ಬಳಿಗಾರ ವಕೀಲರು



ಧೈರ್ಯದ ದಾರಿ

**ಮಾನ್ವಿ :** ಹೆಣ್ಣೆಂದರೆ ಪೀಡೆ ಅಲ್ಲ ಹೆಣ್ಣೆಂದರೆ ಶಕ್ತಿ, ಹೆಣ್ಣೆಂದರೆ ಶೋಕ ಅಲ್ಲ ಹೆಣ್ಣೆಂದರೆ ಸಂಸ್ಕೃತಿ ಎಂದು ಶ್ರೀದೇವಿ ಬಳಿಗಾರ ಹೇಳಿದರು. ಪಟ್ಟಣದ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯ (ಬಿ.ಇಡಿ) ಮಾನ್ವಿ ಹಾಗೂ ತಾಲೂಕ ಕಾನೂನು ಸೇವಾ ಸಮಿತಿ, ಮಾನ್ವಿ ತಾಲೂಕ ಅಧಿಕಾರಿಗಳು ಮಾನ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಅರಿವು ಹಾಗೂ ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಶ್ರೀದೇವಿ ಬಳಿಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಪ್ರತಿಯೊಬ್ಬ ಮಹಿಳೆಯರು ಇಂದು ಎಲ್ಲಾ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಉತ್ತಮವಾದ ಬದುಕನ್ನು ಕಟ್ಟಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಇಂದಿನ ಹೆಣ್ಣು ಅಬಲೆಯಲ್ಲ ಸಬಲೆಯಾಗಿದ್ದಾಳೆ.

ಮಹಿಳೆಯರಿಗೆ ಇತ್ತೀಚಿನ ದಿನಮಾನಗಳಲ್ಲಿ ಮಹಿಳೆಯರ ಕಾನೂನುಗಳು ದುರ್ಬಳಕೆ ಆಗುತ್ತಿರುವುದು ಬಹಳ ದುರಂತದ ಸಂಗತಿಯಾಗಿದೆ. ಕೌಟುಂಬಿಕ ದೌರ್ಜನ್ಯ ಕಾಯ್ದೆ ಗಳು , ವರದಕ್ಷಿಣೆ ಕಾಯ್ದೆಗಳು, ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ಇನ್ನು ಹಲವಾರು ಕಾನೂನುಗಳು ಇದ್ದರು ಕೂಡ ಮಹಿಳೆಯರ ಮೇಲೆ ಮತ್ತು ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯಗಳು ನಡೀತಾ ಇದಾವೆ ಇವುಗಳನ್ನು ತಡೆಗಟ್ಟಬೇಕೆಂದರೆ ಮಹಿಳೆಯರು ಎಚ್ಚೆತ್ತುಕೊಂಡು ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು ಜಾಗೃತಿ ಮೂಡಿಸಿದಾಗ ಮಹಿಳೆಯರಿಗೆ ಸಮಾಜದಲ್ಲಿ ಸಾಮಾಜಿಕ ಸ್ಥಾನ ಮಾನಗಳು ದೊರಕಲು ಸಾಧ್ಯವಾಗುತ್ತದೆ ಎಂದು ಹೇಳಿದರು.ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಡಾ. ಕಾವ್ಯ ಲಕ್ಷ್ಮೀ ವೈದ್ಯರು ಮಾತನಾಡಿ ಒಬ್ಬ ಮಹಿಳೆಯ ಹಿಂದೆ ಒಬ್ಬ ಪುರುಷನ ಸಹಕಾರ ಇದ್ದರೆ ಸಮಾಜದಲ್ಲಿ ಒಳ್ಳೇಯ ಸ್ಥಾನ ಗಳಿಸಲು ಸಾಧ್ಯವಾಗುತ್ತದೆ. ಹೆಣ್ಣುಮಕ್ಕಳು ಎಂಥಹ ಕಷ್ಟ ಬಂದರು ಶಿಕ್ಷಣ ವನ್ನು ಕುಂಟಿತಗೊಳಿಸದೇ ಉತ್ತಮವಾಗಿ ಅಭ್ಯಾಸ ಮಾಡಿ ಉನ್ನತ ಸ್ಥಾನ ಪಡೆದು ಕೊಳ್ಳಿ ಎಂದು ಹೇಳಿದರು. ಕಾರ್ಯಕ್ರಮದ ಕುರಿತು ಮಂಜುಳಾ ಕಿಶೋರ್ ಕುಮಾರ ಮಾತನಾಡಿದರು. ಹಾಗೂ ಈರಣ್ಣ ಮರ್ಲಟ್ಟಿ ಉಪನ್ಯಾಸಕರು ಮಾತನಾಡಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಡಾ ಹೈಮವಿ ಮಧುಸೂದನ್ ಗುಪ್ತಾಜಿ ಕಾರ್ಯದರ್ಶಿ ಶಾರದಾ ಶಿಕ್ಷಣ ಸಂಸ್ಥೆಯಯವರು ಮಾತನಾಡಿ ಜೀವನ ಎನ್ನುವುದು ಯಾವ ಸಮಯದಲ್ಲಿ ಹೇಗೆ ಕಷ್ಟ ಬರುತ್ತೆ ಅದನ್ನು ಸ್ವೀಕರಿಸಬೇಕು ಎಂತಹ ಕಷ್ಟಗಳು ಬಂದರು ಹೆದುರಿಸುವ ಧೈರ್ಯ ಇರಬೇಕು ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಉಮಾಮಹೇಶ್ವರಿ ಮದುಸೂಧನ ಗುಪ್ತಾಜಿ ಅಧ್ಯಕ್ಷರು ಶಾರದಾ ಶಿಕ್ಷಣ ಸಂಸ್ಥೆ ಮಾನ್ವಿ, ಜಿ.ಎಸ್ ವರ್ಷಿತಾ,ಉಪಪ್ರಚಾರ್ಯರಾದ ವೀರಭದ್ರಯ್ಯ ಹಿರೇಮಠ ಉಪನ್ಯಾಸಕರು ಹಾಗೂ ಬಿ.ಈಡಿ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಿಯದರ್ಶಿನಿ ಪ್ರಶಿಕ್ಷಣಾರ್ಥಿ ಹಾಗೂ ಬಂಡೆಮ್ಮ ನಿರೂಪಿಸಿದರು. ಲಲಿತಾ ಪ್ರಾರ್ಥನೆ ಗೀತೆಯನ್ನು ಹಾಡಿದರು. ವನಿತಾ ಸ್ವಾಗತಿಸಿದರು. ಅಂಬಿಕಾ ವಂದಿಸಿದರು.

## ಮಾ.28 ರಂದು ಈದ್ ಸೌಹಾರ್ದ ಕೂಟ : ಅಬ್ದುಲ್ ರೆಹಮಾನ್



**ಮಾನ್ವಿ:** ಪಟ್ಟಣದ ಪತ್ರಿಕಾ ಭವನದಲ್ಲಿ ಜಮಾಅತೇ ಇಸ್ಲಾಮೀ ಹಿಂದ್ ಮಾನ್ವಿ ತಾ.ಅಧ್ಯಕ್ಷರಾದ ಅಬ್ದುಲ್ ರೆಹಮಾನ್ ಮಾತನಾಡಿ ಪಟ್ಟಣದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಮೂಡಿಸುವ ಉದ್ದೇಶದಿಂದ ಹಾಗೂ ಸಮುದಾಯದ ಎಲ್ಲಾ ಸಮುದಾಯಗಳವರೊಂದಿಗೆ ಹಬ್ಬಗಳನ್ನು ಆಚರಿಸುವ ಉದ್ದೇಶದಿಂದ ಜಮಾಅತೇ ಇಸ್ಲಾಮೀ ಹಿಂದ್ ಮಾನ್ವಿ ವತಿಯಿಂದ ಪವಿತ್ರ ಈದ್–ಉಲ್ ಫಿತರ್ ಹಬ್ಬದ ಅಂಗವಾಗಿ ಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್. ಆವರಣದಲ್ಲಿ ಮಾ. 28 ರಂದು ಸಂಜೆ 7–15 ಕ್ಕೆ ಈದ್ ಸೌಹಾರ್ದ ಕೂಟವನ್ನು ಹಮ್ಮಿಕೊಳ್ಳಲಾಗಿದು ರಾಜ್ಯ ಸಚಿವರಾದ ಎನ್.ಎಸ್.ಬೋಸರಾಜು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು,ಸೆಂಟ್ ಮೇರಿ ಚರ್ಚ್ ಫಾ. ಸುರೇಶ್ ವಿನ್ಸೆಂಟ್ ಸಾನಿದ್ಯ ವಹಿಸಲಿದ್ದಾರೆ. ಇಲಕಲ್‌ನ ಲಾಲ್ ಹುಸೇನ್ ಕಂದಗಲ್ ಉಪನ್ಯಾಸ ನೀಡಲಿದ್ದಾರೆ.ಕಾರ್ಯಕ್ರಮದಲ್ಲಿ ಶಾಸಕ ಹಂಪಯ್ಯನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ರಾಜಾವೆಂಕಟಪ್ಪನಾಯಕ, ಗಂಗಾಧರ ನಾಯಕ, ವೆಲ್ ಫೇರ್ ಪಾರ್ಟೀ ಆಫ್ ಇಂಡಿಯಾ ಜಿಲ್ಲಾಧ್ಯಕ್ಷರಾದ ಮೌಲಾನ ಶೇಖ್ ಫರೀದ್ ಉಮ್ರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ, ಅಧ್ಯಕ್ಷತೆಯನ್ನು ಜಮಾಅತೇ ಇಸ್ಲಾಮೀ ಹಿಂದ್ ಜಿಲ್ಲಾ ಸಂಚಲಕರಾದ ಅನ್ವರ್ ಕರೀಮ್ ಖಾನ್ ಸಾಬ್ ವಹಿಸಲಿದ್ದಾರೆ.ಈದ್ಗಾ ಕಮಿಟಿ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ರಾಬ್‌ತ್ ಮಿಲ್ಲತ್ ಹಾಗೂ ದಾರುಸ್ಸಲಾಮ್ ಫೌಂಡೇಷನ್ ಅಧ್ಯಕ್ಷರಾದ ಸೈಯಾದ್ ಅಕ್ಬರ್ ಪಾಷಾ ಹುಸೇನಿ ರವರು ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಜಮಾಅತೇ ಇಸ್ಲಾಮೀ ಹಿಂದ್ ಜಿಲ್ಲಾ ಸಂಚಲಕರಾದ ಅನ್ವರ್ ಕರೀಮ್ ಖಾನ್ ಸಾಬ್, ಸೈಯಾದ್ ಅಕ್ಬರ್ ಪಾಷಾ ಹುಸೇನಿ, ಉಮರ್ ದೇವರಮನಿ,ಎಂ.ಹೆಚ್.ಎ. ಮುಖೀಮ್ , ಮುಹಮ್ಮದ್ ದಾವೂದ್ ಸಿದ್ದಿಖಿ ಶಾಬ್, ಶೇಖಬಾಬಾ ಹುಸೇನ್, ಎಸ್.ಐ.ಓ. ಕಾರ್ಯದರ್ಶಿ ಮುಹಮ್ಮದ್ ಅಖ್ತಾರ್ ಇದ್ದರು.

# 17 ಬಜೆಟ್ ಗಳಲ್ಲೂ ರಾಜ್ಯದ ಹಿತ ಕಾಪಾಡಿದ್ದೇನೆ



**ಬೆಂಗಳೂರು,ಮಾ.26–** ರಾಜ್ಯದ ಹಾಗೂ ಜನರ ಹಿತ ಕಾಪಾಡಿದಿದ್ದರೆ ನಾನು ಹಣಕಾಸು ಖಾತೆವಹಸಿಕೊಂಡು ದಾಖಲೆಯ 17 ಬಜೆಟ್ ಮುಂಡಿಸಲು ಸಾಧ್ಯವಾಗುತ್ತಿತ್ತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಲ್ಮನೆಯಲ್ಲಿ ಪ್ರಶ್ನಿಸಿದರು.

ಜನಪರ ಕಾರ್ಯಗಳು ರಾಜ್ಯ ಹಿತ ಕಾಪಾಡುವ ಕೆಲಸಗಳ ಜೊತೆಗೆ ಶಾಸಕರು, ವಿಧಾನಪರಿಷತ್ ಸದಸ್ಯರು, ರಾಜ್ಯದ ಜನತೆ ಪಕ್ಷದ ಹೈಕಮಾಂಡ್ ಬೆಂಬಲ ಇಲ್ಲದಿದ್ದರೆ ನಾನು ದಾಖಲೆಯ 17 ಬಜೆಟ್ ಮಂಡಿಸಲು ಹೇಗೆ ಸಾಧ್ಯವಾಗುತ್ತಿತ್ತು. ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಬಿಜೆಪಿಯ 14 ಕಾಂಗ್ರೆಸ್ ನ 10 ಜೆಡಿಎಸ್ ನ ಇಬ್ಬರು ಸೇರಿ ,
26 ಮಂದಿ ಸದಸ್ಯರು ಸುಮಾರು 14 ಗಂಟೆ 40 ನಿಮಿಷಗಳ ಕಾಲ ಮಾತನಾಡಿರುವುದಕ್ಕೆ ಉತ್ತರ ನೀಡಿದ ಮುಖ್ಯಮಂತ್ರಿಗಳು,ನೀವು ಮುಂದಿನ ಎರಡು ಬಜೆಟ್ ಮಂಡಿಸುವುದಾದರೆ ಮುಖ್ಯಮಂತ್ರಿಯಾಗೇ ಇರಿ. ಆದರೆ ಅರ್ಥಸಚಿವರಾಗಿರುವುದು ಬೇಡ ಎಂದು ಪ್ರತಿಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಕಾಲೆಳೆದರು. ನಾನು 1994ರಲ್ಲಿ ಮೊದಲ ಬಾರಿಗೆ ಹಣಕಾಸು ಸಚಿವನಾಗಿ ಬಜೆಟ್ ಮಂಡನೆ ಮಾಡಿದ್ದೆ.

ಅಲ್ಲಿಂದ ಈವರೆಗೂ ಒಟ್ಟು 17 ಬಜೆಟ್ ಮಂಡಿಸಿದ್ದೇನೆ. ಕರ್ನಾಟಕದಲ್ಲಿ ನಾನು ಮಂಡಿಸಿದಷ್ಟು ಆಯವ್ಯಯಗಳನ್ನು ಯಾರೂ ಕೂಡ ಮಂಡಿಸಿಲ್ಲ. ಇದು ಒಂದು ದಾಖಲೆ ಎಂದು ತಮನ್ನು ತಾವೇ ಹೊಗಳಿಕೊಂಡರು.

ನನಗೆ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ರಾಜ್ಯದ ಜನತೆಯ ಆಶೀರ್ವಾದವಿದೆ. ಹೈಕಮಾಂಡ್‌ನ ಬೆಂಬಲವಿದೆ. ನಾನು ರಾಜ್ಯದ ಹಿತಾಸಕ್ತಿ ಮತ್ತು ಜನಪರವಾದ ಬಜೆಟ್ ಮಂಡನೆ ಮಾಡದಿದ್ದರೆ ನನಗೆ ಇಂಥ ಅವಕಾಶ ಸಿಗುತ್ತಿತ್ತೇ ಎಂದು ಪ್ರಶ್ನಿಸಿದರು
ನಾನು ಜನಪರವಾಗಿ ರಾಜ್ಯದ ಹಿತವನ್ನು ಕಾಪಾಡಿದ್ದರಿಂದಲೇ ನನಗೆ ಇಷ್ಟೂ ಅವಕಾಶ ಸಿಕ್ಕಿದೆ. ನೀವು ಎಷ್ಟೇ ಟೀಕೆ ಟಿಪ್ಪಣಿ ಮಾಡಿದರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಹೋಲಿಕೆ ಮಾಡಿಕೊಳ್ಳಬಾರದೆಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರ್ಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರ್ಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರ ಸದೃಢವಾದರೆ ರಾಜ್ಯಗಳು ಪ್ರಬಲವಾಗುತ್ತವೆ.
ಇದನ್ನೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ಟೀಕೆ ಮಾಡಲೇಬಾರದು ಎಂದರೆ ಹೇಗೆ? ಎಂದು ಮೂದಲಿಸಿದರು. ರಾಜ್ಯ ಸರ್ಕಾರದ ಬಜೆಟ್‌ನ್ನು ನಾವು ಮುನ್ಸಿಪಾಲಿಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ. ಕೇಂದ್ರ ಸರ್ಕಾರಕ್ಕೆ ಹೋಲಿಕೆ ಮಾಡಲೇಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆಯನ್ನು ಪಾವತಿಸುತ್ತೇವೆ.

2025-26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿಗೂ ಹೆಚ್ಚು ತೆರಿಗೆಯನ್ನು ಪಾವತಿಸಿದೆ. ಆದರೆ ನಮಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವುದು ಅತ್ಯಲ್ಪ. ನಮ ರಾಜ್ಯಕ್ಕೆ ಅನ್ಯಾಯವಾದಾಗ ನಾವು ಪ್ರಶ್ನೆ ಮಾಡಲೇಬೇಕಾಗುತ್ತದೆ. ಹಣಕಾಸು ಆಯೋಗ ಇರುವುದು ಏತಕ್ಕೆ? ಟೀಕೆ ಮಾಡದಿದ್ದರೆ ಅದನ್ನು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೊಮ್ಮಾಯಿ ಖರ್ಚು:
ಮುಖ್ಯಮಂತ್ರಿಗಳು ವಿಮಾನ ಪ್ರಯಾಣ ಮತ್ತು ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದುವೆಚ್ಚ ಮಾಡಿದ್ದಾರೆಂದು ಪ್ರತಿಪಕ್ಷದ ನಾಯಕರು ಆರೋಪ ಮಾಡಿದ್ದಾರೆ. ನಾನು ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಖರ್ಚು ಮಾಡಿದ್ದೇನೋ ಬಸರಾಜ ಬೊಮ್ಮಾಯಿ ಅವರು 2022-23ರಲ್ಲಿ 37 ಕೋಟಿ ರೂ. ವಿಮಾನದಲ್ಲಿ ಪ್ರಯಾಣಿಸಲು ಖರ್ಚು ಮಾಡಿದ್ದಾರೆ.

ನಾನು 2023ರಿಂದ ಈವರೆಗೂ ಮಾಡಿರುವ ಖರ್ಚು ಕೇವಲ 12 ಕೋಟಿ ಅತ್ಯಲ್ಪ.ಉಳಿದ ಎರಡು ವರ್ಷಗಳಲ್ಲಿ ತಲಾ 21 ಕೋಟಿ ಮಾಡಿದ್ದೇನೆ ನಾವು ಮಾಡಿದರೆ ದುಂದುವೆಚ್ಚ ಹಾಗಾದರೆ ಬಿಜೆಪಿಯವರು ಮಾಡುವುದು ಏನು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಪ್ರಧಾನಿ ನರೇಂದ್ರಮೋದಿ ಅವರು ವಿದೇಶ ಪ್ರವಾಸಕ್ಕಾಗಿ 814 ಕೋಟಿ ಹಣವನ್ನು ವೆಚ್ಚ ಮಾಡಿದರು. ಕೆಲವು ಸಂದರ್ಭಗಳಲ್ಲಿ ಸಮಯ ಉಳಿಸಲು ನಾವು ವಿಮಾನ ಇಲ್ಲವೇ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಬೇಕಾಗುತ್ತದೆ. ಇದು ಅನಿವಾರ್ಯತೆಯೂ ಹೌದು ಎಂದು ತಮ ನಡೆಯನ್ನು ಸಿಎಂ ಸಮರ್ಥನೆ ಮಾಡಿಕೊಂಡರು.

# ಗ್ರಾಹಕರ ಪರಿಹಾರ ವೇದಿಕೆ ಕಾಯ್ದೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ: ಜಿಲ್ಲಾಧಿಕಾರಿ ಡಾ. ಆನಂದ ಸೂಚನೆ




**ವಿಜಯಪುರ, ಮಾ.26:**ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಗ್ರಾಹಕರ ಪರಿಹಾರ ವೇದಿಕೆ ಕಾಯ್ದೆ ಕುರಿತು ರೈತರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಪ್ರಾಧಿಕಾರ, ಕೆಎಫ್ ಸಿಎಸ್ಸಿ ನಿಗಮ ವಿಜಯಪುರ, ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ನ್ಯೂ ಸಂಸ್ಥೆಯ ಸಹಯೋಗದಲ್ಲಿ ಬುಧವಾರ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ನಡೆದ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯ ವಸ್ತುಗಳನ್ನು ಖರೀದಿಸುತ್ತಿದ್ದು, ಖರೀದಿಸಿದ ವಸ್ತುವಿಗೆ ನಾವು ಗ್ರಾಹಕರಾಗುತ್ತೇವೆ. ನಮಗೆ ಖರೀದಿಸಿದ ವಸ್ತುವಿನಲ್ಲಿ ಮೋಸವಾಗಿದೆ ಎಂದು ತಿಳಿದಾಗ ನಾವು ಪರಿಹಾರಕ್ಕಾಗಿ ಈ ವೇದಿಕೆಗೆ ದೂರು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ರೈತರು ಸೇರಿದಂತೆ ಈ ಕಾಯ್ದೆ ಎಲ್ಲರಿಗೂ ಅನುಕೂಲವಾಗಿದೆ. ಈ ಕಾಯ್ದೆಯಡಿ ಪರಿಹಾರ ಒದಗಿಸುವಲ್ಲಿ ಸಹಕಾರಿಯಾಗಲಿದೆ ಎಂದು ಹೇಳಿದರು.

ಕಮಲ ಕಿಶೋರ ಜೋಶಿ ಮಾತನಾಡಿ, ಮಾರುಕಟ್ಟೆಯಲ್ಲಿ ನಾವು ಖರೀದಿಸುವ ಪ್ರತಿಯೊಂದು ವಸ್ತುವಿನ ನಿಖರ ಮಾಹಿತಿ ಪಡೆದುಕೊಳ್ಳಬೇಕು. ಪ್ರತಿ ವಸ್ತುವಿನ ಮೇಲೆ ಕನಿಷ್ಟ ದರ, ಮುಕ್ತಾಯದ ದಿನಾಂಕ ಹಾಗೂ ಉತ್ಪಾದನೆ ಕುರಿತ ಮಾಹಿತಿ ನಮೂದಿಸಲಾಗಿರುತ್ತದೆ. ಒಂದು ವೇಳೆ ಇದು ಯಾವುದು ಇಲ್ಲದಿದ್ದಲ್ಲಿ ಗ್ರಾಹಕರಾದ ನಾವು ಅಂಗಡಿ ಮಾಲಿಕರನ್ನು ಪ್ರಶ್ನಿಸಿ ಅವರಿಂದ ಸಮರ್ಪಕ ಮಾಹಿತಿ ಪಡೆದುಕೊಳ್ಳಬೇಕು ಎಂದರು.

ಮಾಹಿತಿ ನೀಡಲು ನಿರಾಕರಿಸಿದ್ದಲ್ಲಿ ದೂರು ದಾಖಲಿಸಿ ಪರಿಹಾರ ಕಂಡುಕೊಳ್ಳಲು ಈ ವೇದಿಕೆ ಬಹಳ ಉಪಯುಕ್ತವಾಗಿದೆ. ಯಾವುದೇ ನ್ಯಾಯವಾದಿಗಳ ಸಹಾಯ ಪಡೆಯದೆ ಮಧ್ಯವರ್ತಿಗಳಿಲ್ಲದೆ ನೇರವಾಗಿ ಈ ವೇದಿಕೆಗೆ ಬಂದು ದೂರು ನೀಡಬಹುದಾಗಿದೆ ಎಂದರು.

ಹಿರಿಯ ನ್ಯಾಯವಾದಿ ಎಂ.ಜಿ ಮಠಪತಿ ಉಪನ್ಯಾಸ ನೀಡಿ, ಯಾವುದೇ ವಸ್ತು ಖರೀದಿಸಿದಲ್ಲಿ ಅದರ ಗುಣಮಟ್ಟ, ಸುರಕ್ಷತೆ ನಾವು ಮೊದಲು ಅರಿಯಬೇಕು. ಅಂದಾಗ ನಾವು ಗ್ರಾಹಕರಾಗುತ್ತೇವೆ. ಅದು ನಮ್ಮ ಹಕ್ಕು ಕೂಡ ಆಗಿದೆ. ಖರೀದಿಸಿದ ವಸ್ತುವಿನಲ್ಲಿ ಮೋಸ ಹಾಗೂ ತೊಂದರೆಗಳಾದಲ್ಲಿ ಪರಿಹಾರಕ್ಕಾಗಿ ಈ ಗ್ರಾಹಕರ ವೇದಿಕೆಯ ಮೂಲಕ ಪರಿಹಾರ ಪಡೆಯಲು ಅವಕಾಶವಿದೆ. ಹಾಗಾಗಿ ಗ್ರಾಹಕರು ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಗಲಗಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ, ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕ ಡಿ .ಆರ್ . ಚೌಗಲಾ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಉಪನಿರ್ದೇಶಕ ವಿನಯ ಕುಮಾರ್ ಪಾಟೀಲ, ಕೆ. ಎಫ್ .ಸಿ ಎಸ್ ಸಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಡಿ .ಆರ್ .ನಾಯ್ಕೋಡಿ, ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ಹಾಗೂ ನ್ಯೂ ಸಂಸ್ಥೆ ಅಧ್ಯಕ್ಷ ಡಾ. ಎಸ್.ಎಂ. ಕರೇಕಲ್ ಸೇರಿದಂತೆ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರರಿದ್ದರು.

ಆಹಾರ ಸುರಕ್ಷತಾ ಅಧಿಕಾರಿ ಆರ್.ಎಸ್. ಬಿರಾದಾರ ವಂದಿಸಿದರು.

ಎಚ್. ಎ. ಮಮದಾಪುರ ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು.

# ಸ್ಕೌಟ್ ಗೈಡ್ ಕಾರ್ಯ ಶ್ಲಾಘನೀಯ: ದೊಡ್ಡಮನಿ



ಧೈರ್ಯದ ದಾರಿ

**ಮಾನ್ವಿ:** ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರ (ಡಯಟ್) ಯರಮರಸ್ -ರಾಯಚೂರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಬಿ.ಬಲರಾಮಕೃಷ್ಣ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಶಾರದಾ ಹಾಗೂ ಕಲ್ಮಠ ಡಿ ಎಡ್ ಪ್ರಶಿಕ್ಷಣಾರ್ಥಿಗಳಿಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಖಾದ್ರಿ ಫಂಕ್ಷನ್ ಹಾಲ್ ನಲ್ಲಿ ಆಯೋಜನೆ ಮಾಡಲಾಯಿತು.

ಚಂದ್ರಶೇಖರ ದೊಡ್ಡಮನಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ,ನಾಯಕತ್ವ ಗುಣ,ಸಾಮಾಜಿಕ ಜವಾಬ್ದಾರಿ ಅಂತಹ ಉತ್ತಮ ಗುಣಗಳನ್ನು ತುಂಬುವಲ್ಲಿ ಸ್ಕೌಟ್ ಗೈಡ್ ಸಂಸ್ಥೆ ಕಾರ್ಯ ಶ್ಲಾಘನೀಯ.ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಗೆ ಸ್ಕೌಟ್ ಗೈಡ್ ಚಟುವಟಿಕೆಗಳು ಸಹಕಾರಿ.ಮಾನ್ವಿ ಸ್ಥಳೀಯ ಸಂಸ್ಥೆಯ ಕಾರ್ಯ ಶ್ಲಾಘನೀಯ ಎಂದರು.

ಎಮ್.ರಾಮಲಿಂಗಪ್ಪ ಕಾರ್ಯದರ್ಶಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.
ನರಸಿಂಹ ಮೂರ್ತಿ ದೇಸಾಯಿ ಜಂಟಿ ಕಾರ್ಯದರ್ಶಿಗಳು ಎಲ್ಲರನ್ನೂ ಸ್ವಾಗತಿಸಿದರು.
ಮುಖ್ಯ ಅತಿಥಿಗಳಾಗಿ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಗದ್ದಿ ಬಸಪ್ಪ ಜಿಲ್ಲಾ ಕಾರ್ಯದರ್ಶಿಗಳು, ಸೈಯದ್ ಮುಜಾತಾಬ್ ಖಾದ್ರಿ ಕಾರ್ಯದರ್ಶಿಗಳು ಮಾನ್ವಿ ಪಬ್ಲಿಕ್ ಶಾಲೆ ಮಾನ್ವಿ, ಮಲ್ಲನಗೌಡ ಎ ಡಿ ಸಿ ಮಾನ್ವಿ ಇವರು ಆಗಮಿಸಿದ್ದರು.

ರಜನಿ.ಡಿ ರಾಜ್ಯ ಪರಿಷತ್ ಸದಸ್ಯರು(ಗೈ) , ವಿಶ್ವನಾಥ ಗೌಡ, ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು, ಆನಂದ ಉಪ್ಪಲ್ ಸ್ಕೌಟ್ಮಾ ಸ್ಟರ್ ಇವರು ಸ್ಕೌಟಿಂಗ್ -ಗೈಡಿಂಗ್ ಒಂದು ದಿನದ ಪ್ರಾರಂಭಿಕ ಶಿಬಿರದ ಕುರಿತು ಮಾಹಿತಿಯನ್ನು ನೀಡಿದರು.

ಉದಯಕುಮಾರ್ ಪತ್ತಾರ್ ಸ್ಕೌಟ್ ಮಾಸ್ಟರ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್ ದೊಡ್ಡಮನಿ ಹಾಗೂ ಸೈಯದ್ ಮುಜತಬಾ ಖಾದ್ರಿ ಅವರನ್ನು ಸ್ಕೌಟ್ ಗೈಡ್ ಸಂಸ್ಥೆ ಪರವಾಗಿ ಸನ್ಮಾನಿಸಲಾಯಿತು.

# ಸಿರವಾರ ಸಮುದಾಯ ಆರೋಗ್ಯ ಕೇಂದ್ರದಲ್ಲಿ 'ವಿಶ್ವ ಕ್ಷಯ ರೋಗ ದಿನಾಚರಣೆ'




ಧೈರ್ಯದ ದಾರಿ

**ಸಿರವಾರ:** ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇತ್ತೀಚೆಗೆ 'ವಿಶ್ವ ಕ್ಷಯ ರೋಗ ದಿನಾಚರಣೆ'ಯನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ದೀಪ ಬೆಳಗುವ ಮೂಲಕ ಗಣ್ಯರು ಉದ್ಘಾಟಿಸಿದರು.
ಕ್ಷಯ ಮುಕ್ತ ಸಮಾಜಕ್ಕೆ ಸಮುದಾಯದ ಸಹಭಾಗಿತ್ವ ಅಗತ್ಯ: ಡಾ. ಸುನಿಲ್ ಸರೋದೆ
ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದ ಡಾ. ಸುನಿಲ್ ಸರೋದೆ ಅವರು, "ಕ್ಷಯ ರೋಗವನ್ನು ನಿರ್ಮೂಲನೆ ಮಾಡಲು ಕೇವಲ ಆರೋಗ್ಯ ಇಲಾಖೆಯ ಪ್ರಯತ್ನವಷ್ಟೇ ಸಾಲದು; ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ಸಮುದಾಯದ ಸಹಭಾಗಿತ್ವ ಅತಿ ಅಗತ್ಯ. ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ತಮ್ಮ ವ್ಯಾಪ್ತಿಯ ಗ್ರಾಮಗಳಲ್ಲಿ ಸಂಶಯಾಸ್ಪದ ಲಕ್ಷಣಗಳಿರುವ ರೋಗಿಗಳನ್ನು ಗುರುತಿಸಿ, ತಕ್ಷಣವೇ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತಂದು ತಪಾಸಣೆ ಮಾಡಿಸಬೇಕು," ಎಂದು ಕರೆ ನೀಡಿದರು.
ಜಾಗೃತಿ ಮತ್ತು ಚಿಕಿತ್ಸೆಯ ಮಹತ್ವ
ಕ್ಷಯ ರೋಗ ಮೇಲ್ವಿಚಾರಕರಾದ ಪ್ರೇಮ್ ಪ್ರಸಾದ್ ಮಾತನಾಡಿ, "ಕ್ಷಯ ರೋಗಕ್ಕೆ ಸುಮಾರು 5000 ವರ್ಷಗಳ ಇತಿಹಾಸವಿದೆ. ಇದು ಗಾಳಿಯ ಮೂಲಕ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಇದರಲ್ಲಿ ಶ್ವಾಸಕೋಶದ ಕ್ಷಯ ಮತ್ತು ಶ್ವಾಸಕೋಶೇತರ ಕ್ಷಯ ಎಂಬ ಎರಡು ವಿಧಗಳಿವೆ. ಒಬ್ಬ ಕ್ಷಯ ರೋಗಿ ಚಿಕಿತ್ಸೆ ಪಡೆಯದಿದ್ದರೆ ವರ್ಷಕ್ಕೆ 10 ರಿಂದ 15 ಜನರಿಗೆ ರೋಗ ಹರಡಬಲ್ಲನು. ಭಾರತವನ್ನು ಕ್ಷಯ ಮುಕ್ತ ಮಾಡುವ ಪ್ರಧಾನಿ ನರೇಂದ್ರ ಮೋದಿಯವರ ಸಂಕಲ್ಪ ಸಾಕಾರಗೊಳ್ಳಲು ಪ್ರತಿಯೊಬ್ಬರೂ ಕೈಜೋಡಿಸಬೇಕು," ಎಂದರು.
ಡಾ. ಜ್ಞಾನ ಸುಂದರಿ (ಮಹತ್ವಾಕಾಂಕ್ಷಿ ತಾಲ್ಲೂಕು ಸಂಯೋಜಕರು): ಸಿರವಾರ ತಾಲ್ಲೂಕನ್ನು ಸಂಪೂರ್ಣ ಕ್ಷಯ ಮುಕ್ತ ಮಾಡಲು ಎಲ್ಲರೂ ಸಹಕರಿಸಬೇಕೆಂದು ಕೋರಿದರು.
ದೇವರಾಜ್ (ಕ್ರೈ ಸಂಸ್ಥೆಯ ತಾಲ್ಲೂಕು ಸಂಯೋಜಕರು): "ಒಂದು ಕುಟುಂಬ ಆರೋಗ್ಯವಾಗಿದ್ದರೆ ಮಾತ್ರ ಗ್ರಾಮ ಸುಭಿಕ್ಷವಾಗಿರಲು ಸಾಧ್ಯ. ಸರ್ಕಾರದ ಉಚಿತ ಚಿಕಿತ್ಸಾ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಆರೋಗ್ಯವಂತ ಸಮಾಜ ನಿರ್ಮಾಣ ಮಾಡೋಣ," ಎಂದು ತಿಳಿಸಿದರು.
ಗಣ್ಯರ ಉಪಸ್ಥಿತಿ
ಈ ಸಂದರ್ಭದಲ್ಲಿ ಡಾ. ಸುರೇಶ್, ವಲಯ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀದೇವಿ, ಫಾರ್ಮಸಿ ಅಧಿಕಾರಿ ವಿದ್ಯಾರಾಣಿ, ಸುರಕ್ಷತಾ ಅಧಿಕಾರಿಗಳಾದ ಸಿದ್ದಮ್ಮ ಮತ್ತು ರಂಜನ್ ಬಿ., ಅಂಗನವಾಡಿ ಮೇಲ್ವಿಚಾರಕಿ ನಿರ್ಮಲ, ಆಶಾ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# 16 ನೇ ಹಣಕಾಸು ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸಲಾಗುವುದು: ಪರಶುರಾಮ ದೇವಮಾನೆ

ಧೈರ್ಯದ ದಾರಿ



**ಮಾನ್ವಿ:** ಪುರಸಭೆಗೆ ಅಗತ್ಯವಿರುವ ಅನುದಾನಕ್ಕಾಗಿ ವರದಿಯನ್ನು ನೀಡಬೇಕಾಗಿರುವುದರಿಂದ ಸಾರ್ವಜನಿಕರಿಂದ ಅಹಾವಾಲುಗಳನ್ನು ಅಲಿಸಿ ಪಟ್ಟಣಕ್ಕೆ ಅಗತ್ಯವಿರುವ ಕುಡಿಯುವ ನೀರು,ಸ್ವಚ್ಚತೆ, ನೈರ್ಮಾಲ್ಯ.ಚರಂಡಿಗಳ ನಿರ್ವಹಣೆ,ರಸ್ತೆ ಸೇರಿದಂತೆ 16 ಅಂಶಗಳಿಗೆ ಹಂಚಿಕೆ ಮಾಡಬೇಕಾಗಿರುವ ಅನುದಾನದ ಪ್ರಸ್ಥವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ತಿಳಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ನಡೆದ 2026-27 ನೇ ಸಾಲಿನ ಪುರಸಭೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ 2026-27 ನೇ ಸಾಲಿಗೆ 16 ನೇ ಹಣಕಾಸು ಯೋಜನೆ ಪ್ರಾರಂಭವಾಗಲಿದ್ದು ರಾಜ್ಯ ಸರ್ಕಾರವು ಕೂಡ ಬಜೆಟ್‌ನಲ್ಲಿ 16 ಹಣಕಾಸು ಯೋಜನೆಗೆ ಅನುದಾನವನ್ನು ಕೂಡ ಬಿಡುಗಡೆ ಮಾಡಿರುವುದರಿಂದ ಅಗತ್ಯ ಪ್ರಸ್ಥವನೆ ಸಲ್ಲಿಸುತ್ತೆವೆ. ಪಟ್ಟಣದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳಿಂದ ಪ್ರತ್ಯಕವಾದ ಆಕ್ಷನ್ ಪ್ಲಾನ್ ರೂಪಿಸಲಾಗುತ್ತಿದೆ.ಪಟ್ಟಣದ ಜಯನಗರ, ಸೇರಿದಂತೆ ವಿವಿಧ ಕಡೆಗಳಲ್ಲಿ ಟ್ಯಾಂಕ್‌ಗಳ ನಿರ್ಮಾಣ ಕಾರ್ಯ ಕೂಡ ಪ್ರಗತಿಯಲ್ಲಿದೆ. ನೀರಿನ ಹೆಚ್ಚಿನ ತೊಂದರೆ ಇರುವ ಹೆಚ್ಚಿನ ಅಗತ್ಯವಿರುವ ವಾರ್ಡ್ಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
ಪುರಸಭೆ ಸಿಬ್ಬಂದಿಗಳು ಕಚೇರಿಗೆ ಅಗತ್ಯವಿರುವ ಗಣಕಯಂತ್ರ,ಕುರ್ಚಿಗಳನ್ನು ನೀಡುವಂತೆ ಕೋರಿದರು , ಪುರಸಭೆ ಆರೋಗ್ಯ ನಿರೀಕ್ಷಕರಾದ ಮಹೇಶ ಮಾತನಾಡಿ ಪಟ್ಟಣದಲ್ಲಿ ಸೋಳೆ ನಿಯಂತ್ರಣಕ್ಕಾಗಿ ಪಾಗೀಂಗ್ ಯಂತ್ರಗಳನ್ನು ನೀಡುವಂತೆ ಮನವಿ ಮಾಡಿದರು. ಕರವೇ ಜನಪರ ಬಣ ರಾಜ್ಯಾಧ್ಯಕ್ಷರಾದ ಶ್ರೀಕಾಂತ ಪಾಟೀಲ್ ಗೂಳಿ ಮಾತನಾಡಿ ಪಟ್ಟಣದಲ್ಲಿ ಬೇಸಿಗೆ ಪ್ರಾರಂಭವಾಗುತ್ತಿರುವ ಹಿನ್ನೇಲೆಯಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಯೋಜನೆಗಳನ್ನು ರೂಪಿಸಿ, ಸಿಲ್ವಾರ್ ಜ್ಯೂಬ್ಲಿ ಟ್ಯಾಂಕ್ ನಿರ್ಮಾಣವಾಗಿ ಮೂರು ವರ್ಷವಾದರು ಕೂಡ ಬಳಕೆ ಮಾಡದೇ ಇರುವುದರಿಂದ ಬಳಕೆ ಮಾಡುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಿ, ಪಟ್ಟಣದಲ್ಲಿನ ಸಾಮೂಹಿಕ ಶೌಚಾಲಯಗಳ ನಿರ್ವಹಣೆಗೆ ಕ್ರಮಕೈಗೊಳ್ಳಿ, ಪಟ್ಟಣದಲ್ಲಿನ ಉದ್ಯಾನವನಗಳ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು. ಮುಖಂಡರಾದ ಜಿಲಾನಿ ಕುರೇಶಿ ,ಪುರಸಭೆ ನಾಮನಿರ್ದೇಶನ ಸದಸ್ಯರಾದ ಹಂಪಯ್ಯನಾಯಕ ಬೆಳಗಿನ ಪೇಟೆ, ಕಾಮೇಶ ಸೇರಿದಂತೆ ಇನ್ನಿತರರು ಮಾತನಾಡಿದರು.

# ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಣುಕು ಪ್ರದರ್ಶನ: ವ್ಯಾಪಕ ಭದ್ರತೆ



**ಬೆಂಗಳೂರು, ಮಾ. 26–** ಬಹು ನಿರೀಕ್ಷಿತ ಇಂಡಿಯನ್ ಪ್ರೀಮಿಯಂ ಲೀಗ್ ಆರಂಭಕ್ಕೆ ಎರಡು ದಿನ ಬಾಕಿ ಉಳಿದಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್ ಸಿಬಿ ಮತ್ತು ಸನ್‌ರೈಸರ್ ಹೈದರಾಬಾದ್ ಉದ್ಘಾಟನೆ ಪಂದ್ಯ ಈ ತಿಂಗಳು 28 ರಂದು ನಡೆಯಲಿರುವ ಹಿನ್ನೆಲೆಯಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತೆ ಕುರಿತಂತೆ ಅಣುಕು ಪ್ರದರ್ಶನ ನಡೆಸಲಾಯಿತು.

ಈ ಉದ್ಘಾಟನಾ ಪಂದ್ಯಕ್ಕೆ ಯಾವುದೇ ಅಡೆತಡೆಯಿಲ್ಲದೆ ಸುಗಮ ನಿರ್ವಹಣೆ ಮತ್ತು ಭದ್ರತೆಗೆ ಪೋಲಿಸ್ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡುವ ದೃಷ್ಟಿಯಿಂದ ಈ ಅಣುಕು ಪ್ರದರ್ಶನ ನಡೆಸಲಾಗಿದೆ.

ಬೆಳಿಗ್ಗೆಯಿಂದ ಆರಂಭವಾದ ಈ ಅಣುಕು ಪ್ರದರ್ಶನದಲ್ಲಿ ಬೆಂಗಳೂರು ಪೋಲಿಸರ ಜೊತೆ ರಾಷ್ಟ್ರೀಯ ಭದ್ರತಾ ಪಡೆ ಕೈ ಜೋಡಿಸಿದೆ. ಒಂದು ಸಾವಿರಕ್ಕೂ ಹೆಚ್ಚು ಪೋಲಿಸ್ ಸಿಬ್ಬಂದಿ ಈ ಅಣುಕು ಪ್ರದರ್ಶನದಲ್ಲಿ ಭಾಗಿಯಾಗಿದ್ದು, ಕ್ರೀಡಾಂಗಣದ ಒಳಗಡೆ ಮತ್ತು ಹೊರಗಡೆ ಬಿಗಿ ಭದ್ರತೆ ಹೇಗೆ ಕಾಪಾಡಬೇಕೆಂಬ ಬಗ್ಗೆ ಪ್ರಾತ್ಯಕ್ಷಿತೆ ನಡೆಸಲಾಯಿತು.

ಕ್ರೀಡಾಂಗಣದ ಗೇಟ್ ಗಳಲ್ಲಿ ಭದ್ರತಾ ತಪಾಸಣೆ ಹೇಗಿರಬೇಕು. ತುರ್ತುಸಂದರ್ಭಗಳಲ್ಲಿ ಜನರನ್ನು ಹೇಗೆ ಹೊರಗೆ ತರಬೇಕು ಎಂಬ ಬಗ್ಗೆ ಪರಿಶೀಲನೆ ನಡೆಸಲಾಯಿತು.ಸಾವಿರಾರು ಸಂಖ್ಯೆಯಲ್ಲಿ ಬರುವ ಕ್ರಿಕೆಟ್ ಅಭಿಮಾನಿಗಳನ್ನು ನಿಯಂತ್ರಿಸುವುದು ಹಾಗೂ ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯುವ ಬಗ್ಗೆ ಅಣುಕು ಪ್ರದರ್ಶನದ ವೇಳೆ ಪೋಲಿಸರಿಗೆ ತರಬೇತಿ ನೀಡಲಾಯಿತು.

ಪಂದ್ಯ ನಡೆಯುವ ಸಮಯದಲ್ಲಿ ಕ್ರೀಡಾಂಗಣದ ಸುತ್ತಮುತ್ತ ಉಂಟಾಗುವ ಟ್ರಾಫಿಕ್ ಕಿರಿಕಿರಿ ತಪ್ಪಿಸಲು ವಿಶೇಷ ಯೋಜನೆಯೊಂದನ್ನು ಸಂಚಾರಿ ಪೋಲಿಸರು ಸಿದ್ಧಪಡಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಕೇಂದ್ರ ವಿಭಾಗದ ಡಿಸಿಸಿ ಅಕ್ಷಯ್, ಮಾ. 28 ರಂದು ನಡೆಯಲಿರುವ ಪಂದ್ಯಕ್ಕೆ ಸಂಪೂರ್ಣ ಭದ್ರತೆ ಒದಗಿಸಲು ಸಕಲ ಸಿದ್ಧತೆಗಳನ್ನು ಮಾಡಲಾಗಿದೆ ಎಂದರು.

ಕಳೆದ ಬಾರಿಗಿಂತ ಈ ಬಾರಿ ಕೆಲವು ಬದಲಾವಣೆಗಳನ್ನು ಮಾಡಲಾಗಿದ್ದು, ಕಬ್ಬನ್ ರಸ್ತೆಯಲ್ಲಿರುವ ಪ್ರವೇಶ ದ್ವಾರಗಳನ್ನು ವಿಸ್ತರಿಸಲಾಗಿದ್ದು ಪ್ರೇಕ್ಷಕರು ಸುಗಮ ಪ್ರವೇಶಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಯಾರಿಗೂ ಫುಟ್‌ಬಾತ್ ಮೇಲೆ ನಿಲ್ಲಲು ಅವಕಾಶ ಇಲ್ಲ ಎಂದು ಹೇಳಿದರು.

ಪೋಲಿಸ್ ಇಲಾಖೆ ಜೊತೆ ಲೋಕೋಪಯೋಗಿ ಇಲಾಖೆ,ವೈದ್ಯಕೀಯ ಸೇವೆಗಳು, ಅಗ್ನಿಶಾಮಕ ಸಿಬ್ಬಂದಿಯನ್ನು ಭದ್ರತೆಗಾಗಿ ಬಳಸಿಕೊಳ್ಳಲಾಗುತ್ತಿದೆ.

ಕಳೆದ ವರ್ಷ ಆರ್ ಸಿಬಿ, ಚಾಂಪಿಯನ್ ಪಟ್ಟ ಅಲಂಕರಿಸಿ ಬೆಂಗಳೂರಿಗೆ ಆರ್ ಸಿಬಿ ಬಂದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ವಿಜಯೋತ್ಸವ ಆಚರಿಸಿದ ವೇಳೆ ಉಂಟಾದ ನೂಕುನುಗ್ಗಲಿನಲ್ಲಿ 11 ಮಂದಿ ಬಲಿಯಾಗಿದ್ದರು. ಇಂತಹ ಅವಘಡಗಳು ತಡೆಯಲು ಪೋಲಿಸ್ ಇಲಾಖೆ ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ.

## ಜಿಲ್ಲಾ ಮಟ್ಟದ ಮಹಿಳಾ ಪದಾಧಿಕಾರಿಗಳ, ಕಾರ್ಯಕರ್ತರ ಸಮಾವೇಶ



**ಬಳ್ಳಾರಿ, ಮಾ.26:** ನಗರದ ಡಾ. ಬಿ ಆರ್ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ದಲಿತ ಮಹಿಳಾ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ರಿ) (ಸ್ವಾಭಿಮಾನಿ ಪ್ರೊ. ಬಿ ಕೃಷ್ಣಪ್ಪ ಬಣ) ವತಿಯಿಂದ ಬಳ್ಳಾರಿ ಜಿಲ್ಲಾ ಮಟ್ಟದ ಮಹಿಳಾ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಸಮಾವೇಶ ಹಾಗೂ ತ್ಯಾಗಮಯಿ ಮಾತೆ ರಮಾಬಾಯಿ ಅಂಬೇಡ್ಕರ್ ಮತ್ತು ಸಾವಿತ್ರಿಬಾಯಿ ಫುಲೆ ರವರ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟನೆಯನ್ನು ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಹಾಗೂ ದಲಿತ ಹಿರಿಯ ಮುಖಂಡರಾದ ಮುಂಡ್ರಿಗಿ ನಾಗರಾಜ ನೆರವರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಜವಳಿ ನಿಗಮದ ಮಾಜಿ ರಾಜ್ಯ ಉಪಾಧ್ಯಕ್ಷರು ಶ್ರೀಮತಿ ಕಮಲ ಮರಿಸ್ವಾಮಿ, ಮುಖ್ಯ ಭಾಷಣ ಮಾಡಿದ ಓ ಆ ವೆಂಕ ಮ್ಮ ಹಾಗೂ ದಲಿತ ಮಹಿಳಾ ಒಕ್ಕೂಟದ ರಾಜ್ಯ ಸಂಚಾಲಕಿ ಯಾದ ಭಾಗ್ಯಮ್ಮ ನಾರಾಯಣಸ್ವಾಮಿ, ರಾಜ್ಯ ಸಂ. ಸಂಚಾಲಕರಾದ ವಿ ನಾರಾಯಣಸ್ವಾಮಿ, ಅಂದಾನಿ ಸೋಮನಹಳ್ಳಿ, ಹೆಗ್ಗರೆ ರಂಗಪ್ಪ, ಕಬ್ಬಳ್ಳಿ ಮೈಲಪ್ಪ, ಅ ಸೋಮಶೇಖರ್, ೦ ಈಶ್ವರಪ್ಪ, ಃ ಶ್ರೀನಿವಾಸ ಮೂರ್ತಿ, ಯಾದಗಿರಿ ಜಿಲ್ಲೆಯ ಸಂಚಾಲಕರಾದ ಶ್ರೀನಿವಾಸ್ ನಾಯಕ್, ಃ ಶಿವಮೂರ್ತಿ, ೦ ಏ ಗಂಗಾಧರ, ಕೆ ಗಿರಿಮಲ್ಲಪ್ಪ ಬಳ್ಳಾರಿ ಜಿಲ್ಲಾ ಡಾ:ಅಂಬೇಡ್ಕರ್ ಸಂಘದ ಮಾಜಿ ಅಧ್ಯಕ್ಷರು, ಗೌಸ್,ಕಣೆಕಲ್ಲು ಮಾಬುಸಾಬು, ಜ್ಯೋತಿ, ಕೃಷ್ಣ, ಮಲ್ಲಿಕಾರ್ಜುನ, ಬಳ್ಳಾರಿ ಜಿಲ್ಲಾ ಸಂಚಾಲಕರಾದ ರಾಮಣ್ಣ ಚೇಳ್ಳಗುರ್ಕಿ, ದಲಿತ ಮಹಿಳಾ ಒಕ್ಕೂಟ ಮಲ್ಲೇಶ್ವರಿ ಹಾಗೂ ಮಹಿಳಾ ಕಾರ್ಯಕರ್ತರು ದಲಿತ ಮುಖಂಡರು ಮೊದಲಾದವರು ಭಾಗವಹಿಸಿದ್ದರು.

# ಮನ್ನಳ್ಳಿಯಲ್ಲಿ ವಿಶ್ವ ಜಲ ದಿನಾಚರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮ



**ಬೀದರ್: ಮಾ.26:** "ಸಮಾಜದಲ್ಲಿ ಆಸಿಡ್ ದಾಳಿಯಂತಹ ಅಮಾನುಷ ಕೃತ್ಯಗಳಿಗೆ ಬಲಿಯಾದ ಸಂತ್ರಸ್ತರಿಗೆ ಕಾನೂನು ಬೆಂಬಲ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ಹೇಳಿದರು.

ಅವರು ಬುಧವಾರ ತಾಲೂಕ ಪಂಚಾಯತ ಬೀದರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಮನ್ನಳ್ಳಿ ಪಂಚಾಯಿತ ಆವರಣದಲ್ಲಿ 'ವಿಶ್ವ ಜಲ ದಿನಾಚರಣೆ' ಅಂಗವಾಗಿ ಆಯೋಜಿಸಿದ 'ಜಲ ಅರ್ಪಣ ದಿವಸ' ಹಾಗೂ ಆಸಿಡ್ ದಾಳಿ ಸಂತ್ರಸ್ತರಿಗೆ ಕಾನೂನು ಸೇವೆ ನೀಡುವ ಕುರಿತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಲ್ಸಾ (ಓಂಐಖಂ) 2016ರ ಯೋಜನೆಯಡಿ ಆಸಿಡ್ ದಾಳಿ ಸಂತ್ರಸ್ತರಿಗೆ ಉಚಿತ ಕಾನೂನು ನೆರವು ಮತ್ತು ಸೂಕ್ತ ಪರಿಹಾರ ಒದಗಿಸಲು ಅವಕಾಶವಿದೆ. ಪ್ರತಿಯೊಬ್ಬ ನಾಗರಿಕರು ಇಂತಹ ಕಾನೂನುಗಳ ಬಗ್ಗೆ ಅರಿವು ಹೊಂದಿರಬೇಕು ಮತ್ತು ಸಂತ್ರಸ್ತರಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು," ಎಂದು ಹೇಳಿದರು.

ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ ಮಾತನಾಡಿ, ?"ಜಲ ಜೀವನ ಮಿಷನ್ ಯೋಜನೆಯಡಿ ಪ್ರತಿ ಮನೆಗೂ ಶುದ್ಧ ಕುಡಿಯುವ ನೀರು ತಲುಪಿಸುವ ಕಾರ್ಯ ಪ್ರಗತಿಯಲ್ಲಿದೆ. ನೀರು ಅಮೂಲ್ಯವಾದ ಸಂಪತ್ತು, ಅದನ್ನು ವ್ಯರ್ಥ ಮಾಡದೆ ಮಿತವಾಗಿ ಬಳಸುವುದು ಮತ್ತು ಸಂರಕ್ಷಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಗ್ರಾಮೀಣ ಭಾಗದ ಜನರು ಈ ನಿಟ್ಟಿನಲ್ಲಿ ಜವಾಬ್ದಾರಿಯಿಂದ ವರ್ತಿಸಬೇಕು," ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಈಗಾಗಲೇ ಕ್ರಮ ವಹಿಸಲಾಗಿದೆ ಹಾಗೂ ಸಹಾಯವಾಣಿ ಸಹ ತೆರೆಯಲಾಗಿದೆ. ನಿಮ್ಮ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾದರೆ ಸಹಾಯವಾಣಿಗೆ ಕರೆ ಮಾಡಿ ಎಂದರು.

ಕಾರ್ಯಕ್ರಮದಲ್ಲಿ ವಕೀಲರಾದ ಜಗನಾಥ ಸೊರಳ್ಳಿ ಅವರು ಕಾನೂನು ಸೇವೆಗಳ ಬಗ್ಗೆ ವಿಸ್ತಾರವಾಗಿ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸನ್ಮುಖಯ್ಯಾ ಬಿ. ಸ್ವಾಮಿ, ಗ್ರಾಮೀಣ ಕುಡಿಯುವ ನೀರು ವಿಭಾಗದ ಉಪ ವಿಭಾಗಾಧಿಕಾರಿ ತಿಪ್ಪೇಶಕುಮಾರ, ಜಲ ಜೀವನ ಮಿಷನ್ ಯೋಜನಾ ವ್ಯವಸ್ಥಾಪಕ ಪೆತ್ರು. ಜೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಕಆಔ) ಕನಕರಾಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸೇಡಂ:ವಿಶ್ವ ಬಾಯಿ ಆರೋಗ್ಯ ದಿನಾಚರಣೆ



**ಕಲಬುರಗಿ,ಮಾ.26–**ಜಿಲ್ಲಾಆಡಳಿತ, ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಆರೋಗ್ಯ ಮಿಷನ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ , ಆರ್ ಸಿ ಹೆಚ್ ಕಾರ್ಯಾಲಯ ಮತ್ತು ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮ ಸರಕಾರಿ ಶುಶ್ರೂಷ ಮಹಾವಿದ್ಯಾಲಯ ಸೇಡಂ ಹಾಗೂ ತಾಲೂಕ ಆರೋಗ್ಯಾಧಿಕಾರಿಗಳ ಕಾರ್ಯಾಲಯ ಸೇಡಂ ಸಹಯೋಗದೊಂದಿಗೆ ಸೇಡಂ ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ವಿಶ್ವ ಬಾಯಿ ಆರೋಗ್ಯ ದಿನ (2026) ಆಚರಿಸಲಾಯಿತು.

"ಸಂತೋಷದ ಬಾಯಿ ಸಂತೋಷದ ಜೀವನ" ಶೀರ್ಷಿಕೆ ಅಡಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಬಸವರಾಜ ಆರ್.ಉಡಗಿ ಅವರು ಸಸಿಗೆ ನೀರು ಉಣಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೇದಿಕೆ ಮೇಲೆ ಮುಖ್ಯ ಅತಿಥಿಗಳಾಗಿ ಆರೋಗ್ಯಾಧಿಕಾರಿ ( ಡಿ ಹೆಚ್ ಓ ) ಡಾ.ಶರಣಬಸಪ್ಪ ಕ್ಯಾತನಾಳ್, ಆರ್‌ಸಿಎಚ್ ಅಧಿಕಾರಿ ಡಾ.ಸಿದ್ದು ಪಾಟೀಲ್, ತಾಲ್ಲೂಕು ಆರೋಗ್ಯ ಅಧಿಕಾರಿ (ಟಿಎಸ್‌ಒ) ಡಾ. ಸಂಜೀವ್ ಪಾಟೀಲ್, ಆಡಳಿತ ವೈಧ್ಯಾಧಿಕಾರಿ ಡಾ.ಮನ್ನೆ ನಾಗರಾಜ, ಡಾ.ಸಂಧ್ಯಾ ಡಾಂಗೆ, ಡಾ.ಪ್ರೀಷಿಲಾ ಇದ್ದರು. ಹಿರಿಯ ದಂತ ಆರೋಗ್ಯ ಅಧಿಕಾರಿ ಡಾ. ಶ್ವೇತಾ ದೇವದುರ್ಗ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ತಾಲೂಕು ಹಿರಿಯ / ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಸಂರಕ್ಷಣಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ನಸಿರ್‌ಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಲಾರಿ ಹರಿದು ವ್ಯಕ್ತಿ ಸಾವು

**ವಾಡಿ,ಮಾ.26–**ಇಲ್ಲಿಗೆ ಸಮೀಪದ ಲಾಡ್ಲಾಪುರ ಗ್ರಾಮದ ಹತ್ತಿರ ರಾಷ್ಟ್ರೀಯ ಹೆದ್ದಾರಿ ಮೇಲೆ ಲಾರಿ ಹರಿದು ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ.

ಮೃತನನ್ನು ಲಾಡ್ಲಾಪುರ ಗ್ರಾಮದ ಶಿವರಾಯ ತಂದೆ ಶಿವಣ್ಣ ಹಳ್ಳಿ ಎಂದು ಗುರುತಿಸಲಾಗಿದೆ.

ಸುದ್ದಿ ತಿಳಿದು ಡಿವೈಎಸ್‌ಪಿ ಶಂಕರಗೌಡ ಪಾಟೀಲ, ವಾಡಿ ಪಿಎಸ್‌ಐ ತಿರುಮಲೇಶ ಕುಂಬಾರ ಮತ್ತು ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಎಬಿವಿಪಿಯ ಉಚಿತ ಸಿಇಟಿ ಸದ್ಬಳಕೆಗೆ ಡಾ. ಸದಾಶಿವ ಜಿಡಿಗೆಕರ ಸಲಹೆ

**ಕಲಬುರಗಿ :ಮಾ.26:** ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ವತಿಯಿಂದ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಮೆಡಿಕಲ್, ಎಂಜಿನೀಯರಿಂಗ್, ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಉಚಿತ ಸಿಇಟಿ ತರಗತಿಗಳನ್ನು ಆಯೋಜಿಸಿರುವುದು ಶ್ಲಾಘನೀಯ ಈ ಭಾಗದ ವಿದ್ಯಾರ್ಥಿಗಳು ಇದರ ಸಂಪೂರ್ಣ ಸದುಪಯೋಗ ಪಡೆದುಕೊಳ್ಳಬೇಕೆಂದು ಕೆ.ಬಿ.ಎನ್. ಆಸ್ಪತ್ರೆಯ ನಿವೃತ್ತರಾದ ಡಾ. ಸದಾಶಿವ ಜಿಡಿಗೆಕರ ಹೇಳಿದರು.


ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕವಬುರಗಿ ವತಿಯಿಂದ ನಗರದ ಪಿ.ಡಿ.ಎ. ಇಂಜನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಿದ ಉಚಿತ ಸಿಇಟಿ ತರಗತಿಗಳನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಉತ್ತಮ ಹಾಗೂ ಗುಣಮಟ್ಟದ ಶಿಕ್ಷಣ ದೊರಕುವಂತಾಗಬೇಕು ಈ ನಿಟ್ಟಿನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತ ಸಿಇಟಿ ತರಗತಿಗಳು ಆಯೋಜಿಸಿರುವುದು ಒಳ್ಳೆಯ ಬೆಳವಣಿಗೆ ಇದರಿಂದ ಬಡ ಹಾಗೂ ಪ್ರತಿಭಾವಂತ ಮಕ್ಕಳಿಗೆ ಅನೂಕುಲವಾಗುತ್ತದೆ ಮತ್ತು ಇದನ್ನು ಪ್ರತಿವರ್ಷ ಆಯೋಜಿಸಬೇಕು ಎಂದು ಸಲಹೆ ನೀಡಿದರು.

ಎಬಿವಿಪಿಯ ಎಸ್.ಎಫ್.ಡಿ ಪ್ರಮುಖರಾದ ಮನೋಜ ಪಾಟೀಲ ಅವರು ಪ್ರತಿ ವರ್ಷದಂತೆ ಈ ವರ್ಷವು ಉಚಿತ ತರಬೇತಿಯ ನಡೆಯುತ್ತದೆ ಅದೇ ವಿದ್ಯಾರ್ಥಿ ಪರಿಷತ್ತಿನ ರಚನಾತ್ಮಕ ಕಾರ್ಯಗಳು ಮಾಡತ್ತಾಯಿದೆ ಮಾತನಾಡಿದರು

ಎಬಿವಿಪಿ ನಗರ ಅಧ್ಯಕ್ಷರಾದ ಕವಿರಾಜ ಪಾಟೀಲ ಮಾತನಾಡಿ ಇಡಿ ದೇಶದಲ್ಲಿ ವಿದ್ಯಾರ್ಥಿಗಳ ಹಿತಕ್ಕಾಗಿ ಹೋರಾಡುತ್ತಾ ಜೊತೆಗೆ ಅನೇಕ ದೇಶಭಕ್ತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಈ ತರಹದ ರಚನಾತ್ಮಕ ಚಟುವಟಿಕೆಗಳನ್ನು ಕೂಡ ಎಬಿವಿಪಿ ವತಿಯಿಂದ ಮಾಡಲಾಗುತ್ತಿದೆ ಎಂದರು.

ಎಬಿವಿಪಿ ವ್ಯವಸ್ಥ ಪ್ರಮುಖರಾದ ಪ್ರಮೋದ ನಾಗುರಿಕರ ಮಾತನಾಡಿ ಇಂದಿನಿಂದ ಪ್ರಾರಂಭವಾಗಿದ್ದು ನುರಿತ ಉಪನ್ಯಾಸಕರಿಂದ ಪ್ರತಿದಿನ ಆರು ಗಂಟೆಗಳ ಕಾಲ ತರಗತಿಗಳನ್ನು ನಡೆಸಲಾಗುತ್ತದೆ. ಹೊಸ ಪಠ್ಯಕ್ರಮದ ಪ್ರಕಾರ ಅಧ್ಯಯನ ಸಾಮಗ್ರಿಗಳು ಮತ್ತು ಮುದ್ರಿತ ಟಿಪ್ಪಣಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುವುದು ಜೊತೆಗೆ



ತರಬೇತಿಗಳ ನಡುವೆ ಪರೀಕ್ಷೆಗಳನ್ನೂ ಕೂಡ ನಡೆಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ತಿನ ಹಿರಿಯ ಕಾರ್ಯಕರ್ತರಾದ ಕೈಲಾಸ ಪಾಟೀಲ, ವಿಭಾಗ ಸಂಘಟನ ಕಾರ್ಯದರ್ಶಿಗಳಾದ ಹೇಮಂತ ಅರಳಿ ,ವಿಭಾಗ ಸಂಚಾಲಕ ಹನುಮಂತ ಬಗಲಿ,ಸಿ.ಇಟಿ. ಸಹ ಸಂಚಾಲಕರಾದ ಅವಿನಾಶ ಗುತ್ತಿಗೆದಾರ, ಅಭಿಷೇಕ್ ಪಾಟೀಲ,ಶಾಂತೇಶ ಚಕ್ಕಡಿ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತ ಸೇರಿದಂತೆ ಇತರರಿದ್ದರು.

# ವಿಕಲಚೇತನರಿಗೆ ವ್ಹೀಲ್‌ಚೇರ್ ವಿತರಣೆ



**ಚಿಂಚೋಳಿ,ಮಾ.26**–ಪಟ್ಟಣದ ಕೃಷ್ಣ ಭೀಮಾ ಸಮೃದ್ಧಿ ಲೋಕಲ್ ಏರಿಯಾ ಬ್ಯಾಂಕನ ಅಖಖ ಚಟುವಟಿಕೆ ಸಾಮಾಜಿಕ ಜವಾಬ್ದಾರಿ ಚಟುವಟಿಕೆಯ ಭಾಗವಾಗಿ ಅಂಗವಿಕಲರಿಗೆ ಪ್ರಾಸ್ಥೆಟಿಕ್ ಅಂಗಗಳನ್ನು ದಾನ ಮಾಡುವುದು ಸಹಾಯಕ ಸಾಧನಗಳು ವೀಲ್‌ಚೇರ್, ಕ್ರಷ್ ಪ್ರಾಸ್ಥೆಟಿಕ್ ಕಾಲುಗಳು ಇತ್ಯಾದಿ ಸಾಮಾನುಗಳನ್ನು ವಿತರಣೆ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು

ಕಾರ್ಯಕ್ರಮ ಉದ್ದೇಶಿಸಿ ಕೃಷ್ಣ ಭೀಮಾ ಸಮೃದ್ಧಿ ಬ್ಯಾಂಕನ ಇಡಿ, ಟಿ ಆರ್ ವಿ ಸತ್ಯನಾರಾಯಣ, ಅವರು ಮಾತನಾಡಿ 2026 ಕೆಬಿಎಸ್ ಬ್ಯಾಂಕ್ ತನ್ನ ಕಾರ್ಯಾಚರಣೆಯ ಚಿಂಚೋಳಿ ಶಾಖೆಯು ಪ್ರದೇಶದಲ್ಲಿ ವಿಕಲಚೇತನರಿಗೆ ಸಹಾಯಕ ಸಾಧನಗಳನ್ನು ವಿತರಿಸುತ್ತಿದೆ 2001 ರಲ್ಲಿ ಸ್ಥಾಪನೆಯಾದ ಕೃಷ್ಣ ಭೀಮಾ ಸಮೃದ್ಧಿ ಸ್ಥಳೀಯ ಪ್ರದೇಶ ಬ್ಯಾಂಕ್ (ಕೆಬಿಎಸ್ ಬ್ಯಾಂಕ್), ಸಣ್ಣ ಮತ್ತು ಅತಿ ಸಣ್ಣ ರೈತರು, ಸಣ್ಣ ವ್ಯವಹಾರಗಳು, ಕುಶಲಕರ್ಮಿಗಳು, ಬೀದಿ ವ್ಯಾಪಾರಿಗಳು ಮತ್ತು ಗ್ರಾಮೀಣ ಉದ್ಯಮಿಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವಲ್ಲಿ 25 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ, ಇದು ಹಣಕಾಸಿನ ಸೇರ್ಪಡೆಗೆ ತನ್ನ ಬದ್ಧತೆಯನ್ನು ಬಲಪಡಿಸುತ್ತದೆ ತಲುಪದವರನ್ನು ತಲುಪುವುದು ಎಂಬ ತನ್ನ ಘೋಷವಾಕ್ಯದೊಂದಿಗೆ, ಕೆಬಿಎಸ್ ಬ್ಯಾಂಕ್ ತಂತ್ರಜ್ಞಾನವನ್ನು ಮಾನವ ಸ್ಪರ್ಶದೊಂದಿಗೆ ಸಂಯೋಜಿಸುವ ಮೂಲಕ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತದೆ. ಬ್ಯಾಂಕ್ 29 ಶಾಖೆಗಳು, 22 ಎಟಿಎಂಗಳು ಮತ್ತು 14 ವ್ಯಾಪಾರ ವರದಿಗಾರರನ್ನು ನಿರ್ವಹಿಸುತ್ತದೆ, ತೆಲಂಗಾಣ, ಕರ್ನಾಟಕ ಮತ್ತು ಆಂಧ್ರಪ್ರದೇಶದ 1,700+ ಹಳ್ಳಿಗಳಲ್ಲಿ 3.5 ಲಕ್ಷಕ್ಕೂ ಹೆಚ್ಚು ಠೇವಣಿದಾರರು ಮತ್ತು 60,000 ಸಾಲಗಾರರು ಸೇರಿದಂತೆ 3.77 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ. ಫೆಬ್ರವರಿ 2026 ರ ವೇಳೆಗೆ ಬ್ಯಾಂಕ್ 1,000 ಕೋಟಿ ವ್ಯವಹಾರವನ್ನು ಸಾಧಿಸಿದೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಅಖಖ) ಉಪಕ್ರಮಗಳ ಭಾಗವಾಗಿ, ಕೆಬಿಎಸ್ ಬ್ಯಾಂಕ್ ಇಂದು ಚಿಂಚೋಳಿ ಪಟ್ಟಣ ಮತ್ತು ಸುಲೇಪೇಟ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ವಿಕಲಚೇತನ ವ್ಯಕ್ತಿಗಳಿಗೆ ಕೃತಕ/ಕೃತಕ ಅಂಗಗಳು, ಟ್ರೈಸಿಕಲ್‌ಗಳು, ವೀಲ್‌ಚೇರ್‌ಗಳು ಮತ್ತು ಶ್ರವಣ ಸಾಧನಗಳು ಸೇರಿದಂತೆ ಸಹಾಯಕ ಸಾಧನಗಳನ್ನು ವಿತರಿಸಿತು, ಇದು ಅವರ ಚಲನಶೀಲತೆಯನ್ನು ಬೆಂಬಲಿಸಲು ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸಲು ಸಹಾಯ ಮಾಡಿತು ಮತ್ತು ಚಿಂಚೋಳಿ ಶಾಖೆಯು ಚಿಂಚೋಳಿ /ಸುಲೇಪೇಟ್ ಪ್ರದೇಶಗಳಲ್ಲಿ 50 ಕ್ಕೂ ಹೆಚ್ಚು ಹಳ್ಳಿಗಳಿಗೆ ಸೇವೆ ಸಲ್ಲಿಸುತ್ತಿದೆ ಎಂದು ಒತ್ತಿ ಹೇಳಿದರು ಅರ್ಥಪೂರ್ಣ ಸಾಮಾಜಿಕ ಕಲ್ಯಾಣ ಉಪಕ್ರಮಗಳನ್ನು ಕೈಗೊಳ್ಳಲು ಬ್ಯಾಂಕ್ ಬದ್ಧವಾಗಿದೆ ಮತ್ತು ಅಂತಹ ಸಿಎಸ್‌ಆರ್ ಚಟುವಟಿಕೆಗಳ ಮೂಲಕ ಸಮುದಾಯ ಅಭಿವೃದ್ಧಿಗೆ ಬೆಂಬಲ ನೀಡುವುದನ್ನು ಮುಂದುವರಿಸುತ್ತದೆ ಎಂದು ಅವರು ಪುನರುಚ್ಚರಿಸಿದರು

ಕೆಬಿಎಸ್ ಬ್ಯಾಂಕ್ ಕೃಷಿ ಸಾಲಗಳು, ಸಂಬಂಧಿತ ಚಟುವಟಿಕೆ ಸಾಲಗಳು, ವ್ಯಾಪಾರ ಸಾಲಗಳು, ಚಿನ್ನದ ಸಾಲಗಳು, ವಸತಿ ಸಾಲಗಳು ಮತ್ತು ಅಡಮಾನ ಸಾಲಗಳು ಸೇರಿದಂತೆ ವ್ಯಾಪಕ ಶ್ರೇಣಿಯ ಹಣಕಾಸು ಉತ್ಪನ್ನಗಳನ್ನು ನೀಡುತ್ತದೆ. ಗಮನಾರ್ಹವಾಗಿ, ಅದರ ಗ್ರಾಹಕರಲ್ಲಿ 55% ಕ್ಕಿಂತ ಹೆಚ್ಚು ಮಹಿಳೆಯರು. ಬ್ಯಾಂಕ್ ಗಕಚಿ, ಖಒಕಖ, ಖಖಿಉಖ/ಓಇಈಖಿ, ಓಂಅಉ, ಮೊಬೈಲ್ ಬ್ಯಾಂಕಿಂಗ್, ಂಖಿಒ ಗಳು ಮತ್ತು ಕಖ– ಆಧಾರಿತ ಪಾವತಿಗಳಂತಹ ಡಿಜಿಟಲ್ ಬ್ಯಾಂಕಿಂಗ್ ಸೇವೆಗಳನ್ನು ಸಹ ಒದಗಿಸುತ್ತದೆ ಇದಕ್ಕೂ ಮೊದಲು, ಚಿಂಚೋಳಿಯ ಶಾಖಾ ವ್ಯವಸ್ಥಾಪಕರಾದ ರಾಜ್‌ಕುಮಾರ್ ಅವರು ಗಣ್ಯರನ್ನು ಸ್ವಾಗತಿಸಿದರು ಮತ್ತು ಪ್ರದೇಶ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬ್ಯಾಂಕಿನ ಉಪಸ್ಥಿತಿಯನ್ನು ಎತ್ತಿ ತೋರಿಸಿದರು ಹಿರಿಯ ನಾಗರಿಕರಿಗೆ ಬ್ಯಾಂಕ್ 9.15% ವರೆಗಿನ ಆಕರ್ಷಕ ಠೇವಣಿ ದರಗಳನ್ನು ನೀಡುತ್ತದೆ ವಿನಂತಿಸಿದರು ಕಾರ್ಯಕ್ರಮದಲ್ಲಿ ಕೃಷ್ಣ ಭೀಮಾ ಸಮೃದ್ಧಿ ಬ್ಯಾಂಕನ ಕಂಪ್ಲೈನ್ಸ ಮುಖ್ಯ ವ್ಯವಸ್ಥಾಪಕರಾದ ಪರಮೇಶ್ವರರಾವ, ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾ. ಮೊಹಮ್ಮದ ಗಫರ, ಚಿಂಚೋಳಿಯ ಕೆ ಬಿ ಎಸ್ ಬ್ಯಾಂಕನ ವ್ಯವಸ್ಥಾಪಕರದ ರಾಜಕುಮಾರ್ ಬಿರಾದರ್, ಬ್ಯಾಂಕಿನ ಸಿಬ್ಬಂದಿಗಳಾದ ಮಹೇಶ್ ಪಾಟೀಲ, ಅಬ್ದುಲ್ ಕಲೀಖ, ಸಚಿನ್, ಮಹೇಶ ಹಿತ್ತಲ, ಗುರುನಾಥ ಪಟವಾದಿ, ಐಶ್ವರ್ಯ, ಮಂಜುನಾಥ್ ಬೆಳಕೋಡಿ, ಪ್ರಭು, ಮತ್ತು ಅನೇಕ ಕೆ ಬಿ ಎಸ್ ಬ್ಯಾಂಕಿನ ಗ್ರಾಹಕರು ಹಾಗೂ ಅನೇಕ ಅಂಗವಿಕಲರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಸಿಯುಕೆಯಲ್ಲಿ ಬಿಹಾರ ದಿನಾಚರಣೆ



**ಕಲಬುರಗಿ:ಮಾ.26:**"ಸಿಯುಕೆ ಒಂದು ಮಿನಿ ಭಾರತ ಮತ್ತು ನಾವು ಎಲ್ಲಾ ರಾಜ್ಯಗಳ ಹಬ್ಬಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗೌರವಿಸುತ್ತೇವೆ ಮತ್ತು ಆಚರಿಸುತ್ತೇವೆ" ಎಂದು ಸಿಯುಕೆಯ ಗೌರವಾನ್ವಿತ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು. ನಿನ್ನೆ ಅವರು ಸಿಯುಕೆಯಲ್ಲಿ ನಡೆದ ಬಿಹಾರ ದಿನಾಚರಣೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ಅವರು ಮುಂದುವರೆದು ಮಾತನಾಡಿ "ಭಾರತವು ವೈವಿಧ್ಯತೆಯಲ್ಲಿ ಏಕತೆಗೆ ಹೆಸರುವಾಸಿಯಾಗಿದೆ. ಶತಮಾನಗಳಿಂದ ನಾವು ವೈವಿಧ್ಯತೆಯನ್ನು ಗೌರವಿಸುತ್ತಿದ್ದೇವೆ ಮತ್ತು ಅದನ್ನು ಪೊ?ಷಿಸಿದ್ದೇವೆ. ಪ್ರತಿಯೊಂದು ರಾಜ್ಯವು ವಿಶಿಷ್ಟವಾದದ್ದನ್ನು ತರುತ್ತದೆ. ಇಂತಹ ಉತ್ಸವಗಳು ಸಾಮರಸ್ಯವನ್ನು ತರುತ್ತವೆ ಮತ್ತು ವಿವಿಧ ರಾಜ್ಯಗಳ ವಿದ್ಯಾರ್ಥಿಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತವೆ. ನಾವೆಲ್ಲರೂ ಒಟ್ಟಾಗಿ ಸಿಯುಕೆಯನ್ನು ಕಲಿಯಲು ಉತ್ತಮ ಸ್ಥಳವನ್ನಾಗಿ ಮಾಡೋಣ" ಎಂದು ಹೇಳಿದರು

ಈ ಕಾರ್ಯಕ್ರಮದಲ್ಲಿ ಪ್ರಸಿದ್ಧ ಭೋಜ್‌ಪುರಿ, ಹಿಂದಿ ಮತ್ತು ತೆಲುಗು ಸಿನಿಮಾ ನಟ ಶ್ರೀ ಪಂಕಜ್ ಕೇಸರಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು.

ಸಾಂಸ್ಕೃತಿಕ ಗೋಷ್ಠಿಯಲ್ಲಿ ವಿವಿಧ ಪ್ರದರ್ಶನಗಳ ಮೂಲಕ ಬಿಹಾರದ ರೋಮಾಂಚಕ ಸಂಪ್ರದಾಯಗಳನ್ನು ಪ್ರದರ್ಶಿಸಿಸಲಾಯಿತು. ಕಾರ್ಯಕ್ರಮವು "ಜೈ ಜೈಭೈರ್ವಿ" ಮತ್ತು "ಕೋಯೆಲ್ ಬಿನ್ ಬಾಗಿಯಾ" ನಂತಹ ಗುಂಪು ಹಾಡುಗಳನ್ನು ಒಳಗೊಂಡಿತ್ತು, ಜಿಜಿಯಾ, ಕಜ್ರಿ ಮತ್ತು ಜಟ್–ಜತಿಸ್‌ನಂತಹ ಸಾಂಪ್ರದಾಯಿಕ ನೃತ್ಯಗಳು ಮತ್ತು ವಿಶೇಷ ಛಾತ್ ಉತ್ಸವದ ಆಕ್ಟ್ ಪ್ರೇಕ್ಷಕರಿಂದ ಉತ್ಸಾಹಭರಿತ ಮೆಚ್ಚುಗೆಯನ್ನು ಪಡೆಯಿತು. ಈ ಕಾರ್ಯಕ್ರಮವು ಬಿಹಾರದ ಜಾನಪದ ಸಂಸ್ಕೃತಿಯ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವ "ಜಿಯಾ ಹೋ ಬಿಹಾರ್ ಕೆ ಲಾಲಾ" ಮತ್ತು "ಮಿಥಿಲಾ ಕೆ ಬೇಟಾ" ಸೇರಿದಂತೆ ಏಕವ್ಯಕ್ತಿ, ಸಂಗೀತ ಪ್ರದರ್ಶನಗಳು, ಕವನ ವಾಚನ ಮತ್ತು ಶಕ್ತಿಯುತ ಗುಂಪು ನೃತ್ಯಗಳನ್ನು ಒಳಗೊಂಡಿತ್ತು.

ಈ ಕಾರ್ಯಕ್ರಮದಲ್ಲಿ ರಾಗಿಣಿ ರಾಜ್‌ಭೋರ್, ರಾಣಿ ಸಿಂಗ್, ಪಂಕಜ್ ಝಾ, ಪ್ರಜ್ಞಾ ಮಲ್ಲಿಕ್, ಮುರಾರಿ ಝಾ, ನಿತೀಶ್, ವಿವೇಕ್ ಮಿಶ್ರಾ, ಸಾಯಂಕಿತ್, ಸುಮಿತ್, ಸಂಕಲ್ಪ್, ಸ್ವಸ್ತಿಕ, ಗಣೇಶ್, ಓಂ ಪ್ರಕಾಶ್, ಪ್ರಿಯಾಂಶು, ನಾರಾಯಣ್, ಶಾಬು, ವೈಷ್ಣವ್, ಮದ್, ಶಬು, ವೈಷ್ಣವ್, ಮದ್, ವೈಷ್ಣವ್ ತಿವಾರಿ ತಮ್ಮ ಪ್ರದರ್ಶನ ನಿಡಿದರು.

ಈ ಕಾರ್ಯಕ್ರಮದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಾಂಪ್ರದಾಯಿಕ ಬಿಹಾರಿ ಪಾಕಪದ್ಧತಿಯಾದ ಲಿಟ್ಟಿಚೋಖಾ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮವು ಸಾಂಸ್ಕೃತಿಕ ಸಾಮರಸ್ಯವನ್ನು ಯಶಸ್ವಿಯಾಗಿ ಬೆಳೆಸಿತು ಮತ್ತು ಬಿಹಾರದ ವೈವಿಧ್ಯಮಯ ಸಂಪ್ರದಾಯಗಳನ್ನು ಎತ್ತಿ ತೋರಿಸಿತು, ವಿಶ್ವವಿದ್ಯಾಲಯ ಸಮುದಾಯದೊಳಗಿನ ಏಕತೆಯ ಮನೋಭಾವವನ್ನು ಬಲಪಡಿಸಿತು.

ಕಾರ್ಯಕ್ರಮವು ಪ್ರೇಕ್ಷಕರ ಸಭೆ ಮತ್ತು "ಗೀತ್" ಮೂಲಕ ಸಾಂಪ್ರದಾಯಿಕ ಸ್ವಾಗತದೊಂದಿಗೆ ಪ್ರಾರಂಭವಾಯಿತು, ನಂತರ ಸಂಗೀತ ಮತ್ತು ಲಲಿತಕಲೆ ವಿಭಾಗದ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ರಾಷ್ಟ್ರೀಯ ಗೀತೆಯೊಂದಿಗೆ ಪ್ರಾರಂಭವಾಯಿತು. ಉದ್ಘಾಟನಾ ಸಮಾರಂಭದಲ್ಲಿ ಸಂಚಾಲಕರಾದ ಪ್ರೊ. ಪ್ರಮೋದ್ ಕುಮಾರ್ ಸ್ವಾಗತ ಭಾಷಣ ಮಾಡಿದರು, ಸಹ–ಸಂಚಾಲಕ ಡಾ. ಪಿ. ಕುಮಾರ್ ಮಂಗಳಂ ಪರಿಚಯಾತ್ಮಕ ಭಾಷಣ ಮಾಡಿದರು. ಗಣ್ಯರನ್ನು ಪಾಗ್, ಪಟ್ಟಾ ಮತ್ತು ಮಧೂಬನಿ ಶೈಲಿಯ ಸಿಯುಕೆ ಲೋಗೋ ಸೇರಿದಂತೆ ಸಾಂಪ್ರದಾಯಿಕ ಗೌರವಗಳೊಂದಿಗೆ ಸನ್ಮಾನಿಸಲಾಯಿತು.

# ಕಾರಂಜಾ ಸಂತ್ರಸ್ತರಿಗೆ ಪರಿಹಾರ:ಶೀಘ್ರ ಸಿಎಂ ಸಭೆ

**ಬೀದರ್:ಮಾ.26:** ಕಾರಂಜಾ ನೀರಾವರಿ ಯೋಜನೆಯಡಿ ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಪರಿಹಾರ ನೀಡುವ ವಿಷಯದಲ್ಲಿ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಲ ಸಂಪನ್ಮೂಲ ಸಚಿವರಾದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಭೆ ನಡೆಸಿ ಸರ್ಕಾರದ ತೀರ್ಮಾನ ಪ್ರಕಟಿಸಲಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ವಿಧಾನಸಭೆ ಅಧಿವೇಶನದಲ್ಲಿ ಮಂಗಳವಾರ ರಾತ್ರಿ ಬೀದರ್ ದಕ್ಷಿಣ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರು. ಮತ್ತೆ ಕಾರಂಜಾ ಸಂತ್ರಸ್ತರ ಸಮಸ್ಯೆ ಬಗ್ಗೆ ಧ್ವನಿ ಎತ್ತಿ ಸುದೀರ್ಘವಾಗಿ ಚರ್ಚೆ ನಡೆಸಿದರು. ಸಂತ್ರಸ್ತರಿಗೆ ವೈಜ್ಞಾನಿಕ ಪರಿಹಾರ ಒದಗಿಸಲು ವಿಶೇಷ ಪ್ಯಾಕೇಜ್ ಘೋಷಿಸಿ, ಸಂತ್ರಸ್ತರ ನಾಲ್ಕು ದಶಕಗಳ ಹೋರಾಟಕ್ಕೆ ಇತಿಶ್ರೀ ಹಾಡುವಂತೆ ಸದನದ ಗಮನ ಸೆಳೆದರು. ಉಪ ಮುಖ್ಯಮಂತ್ರಿ ಮತ್ತು ಜಲ ಸಂಪನ್ಮೂಲ ಸಚಿವರಾದ ಡಿ.ಕೆ.ಶಿವಕುಮಾರ್ ಅವರ ಪರವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬೆಲ್ದಾಳೆ ಪ್ರಶ್ನೆಗೆ ಉತ್ತರಿಸಿದರು. ಕಾರಂಜಾ ಸಂತ್ರಸ್ತರ ಪರಿಹಾರ ಬೇಡಿಕೆ ಸಂಬಂಧ ಕಲಬುರಗಿ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ರಚಿಸಿದ್ದ ಸಮಿತಿ 2025ರ ನವೆಂಬರ್ 13 ರಂದು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಈ ವರದಿ ಕಾನೂನು, ಕಂದಾಯ, ಆರ್ಥಿಕ ಇಲಾಖೆ ಅಭಿಪ್ರಾಯಕ್ಕೆ ಹೋಗಿದೆ.ಅಲ್ಲಿಂದ ಅಭಿಪ್ರಾಯ ಬಂದ ಮೇಲೆ ಸಿಎಂ, ಡಿಸಿಎಂ ಅವರು ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ ಎಂದರು.ಪ್ರಾದೇಶಿಕ ಆಯುಕ್ತರ ವರದಿ ಜೊತೆಗೆ ಸರ್ಕಾರದ ಅಪರ ಕಾರ್ಯದರ್ಶಿ ವರದಿ ಸಹ ಹೋಲಿಕೆ ಮಾಡಬೇಕಾಗುತ್ತದೆ. ಬಳಿಕ ಕಾನೂನು, ಕಂದಾಯ ಇಲಾಖೆಯಿಂದ ಏನು ವರದಿ ಬರುತ್ತದೆ ನೋಡಿಕೊಂಡು ಆರ್ಥಿಕ ಇಲಾಖೆಗೆ ಇದನ್ನು ಮಂಡನೆ ಮಾಡಲಾಗುತ್ತದೆ.

ಇದಾದ ನಂತರ ಸಿಎಂ, ಡಿಸಿಎಂ ಅವರು ನಿಮ್ಮ ಜೊತೆಗೆ ಮತ್ತೊಂದು ಸಭೆ ನಡೆಸಿ ಸರ್ಕಾರದ ತೀರ್ಮಾನ ತಿಳಿಸುತ್ತಾರೆ. ಸತತ ನೀವು ಸಂತ್ರಸ್ತರ ಸಮಸ್ಯೆಯನ್ನು ಸರ್ಕಾರದ ಮುಂದಿಟ್ಟಿರಿ. ನೀವು ಹೇಳಿದ್ದಕ್ಕಾಗಿಯೇ ಹಿಂದೆ ಬೆಳಗಾವಿಯಲ್ಲಿ ಸಿಎಂ, ಡಿಸಿಎಂ ಸಭೆ ಕರೆದಿದ್ದರು. ಸಮಿತಿ ಸಹ ರಚಿಸಿದ್ದರು. ಈಗ ವರದಿ ಸರ್ಕಾರದ ಮುಂದಿದೆ. ಇಷ್ಟು ದಿವಸ ಕಾದಿರುವಿರಿ. ಇನ್ನು ಸ್ವಲ್ಪ ದಿನ ಕಾಯಿರಿ ಎಂದು ಶಾಸಕ ಬೆಲ್ದಾಳೆ ಅವರಿಗೆ ಕೋರಿದರು.

ಧರ್ಮಸಿಂಗ್ ಅವರು ಸಿಎಂ ಇದ್ದಾಗ ವಿಶೇಷ ಪ್ಯಾಕೇಜ್ ನೀಡಿಕೆ ಸಂಬಂಧ ಹೈಪವರ್ ಕಮಿಟಿ ರಚಿಸಲಾಗಿತ್ತು. 60 ಕೋಟಿ ಕೊಡುವುದಾಗಿಯೂ ಹೇಳಿದ್ದರು. ಆದರೆ ನಂತರ ಆಗಿನ ಅಧಿಕಾರಿಗಳು ಕೆಲವು ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಪರಿಹಾರ ಸಿಕ್ಕಿಲ್ಲ. ಬಳಿಕ ಸರ್ಕಾರ ಬದಲಾಯಿತು, ಸಮಸ್ಯೆ ಹಾಗೆಯೇ ಉಳಿಯಿತು. ಈಗ ಮತ್ತೊಂದು ಹಂತಕ್ಕೆ ಬಂದು ನಿಂತಿದೆ. ಸಂತಸ್ತರಿಗೆ ಸಾವಿರ ಕೋಟಿ ಪ್ಯಾಕೇಜ್ ಕಲ್ಪಿಸಿ, ಮಾನವೀಯ ನೆಲೆಗಟ್ಟಿನಲ್ಲಿ ಪರಿಹಾರ ಒದಗಿಸಿ ಅವರಿಗೆ ಹೊಸ ಜೀವನ ನೀಡುವಂತೆ ಶಾಸಕ ಬೆಲ್ದಾಳೆ ಕೈ ಮುಗಿದು ಮನವಿ ಮಾಡಿದರು.ಕಾರಂಜಾ ಜಲಾಶಯದಿಂದ ಸಾವಿರಾರು ಎಕರೆಗೆ ನೀರಾವರಿ ಸೌಲಭ್ಯ ಸಿಗುತ್ತಿದೆ. ಬೀದರ್ ನಗರ, ಭಾಲ್ಕಿ, ಹುಮನಾಬಾದ್, ಚಿಟಗುಪ್ಪ, ಔರಾದ್ ಪಟ್ಟಣ ಸೇರಿದಂತೆ ನೂರಾರು ಗ್ರಾಮಗಳಿಗೆ ನಿತ್ಯ ಕುಡಿಯುವ ನೀರಿಗೆ ಈ ಜಲಾಶಯ ಮೂಲವಾಗಿದೆ. 3 ಬಹು ಗ್ರಾಮ ನೀರು ಸರಬರಾಜು ಯೋಜನೆ ಸಹ ಇಲ್ಲಿ ನಡೆಯುತ್ತಿವೆ. ಆದರೆ ಇದಕ್ಕೆ ಭೂಮಿ ಕೊಟ್ಟ ರೈತರ ಬದುಕು ಮಾತ್ರ ಬರಡಾಗಿದೆ. ಸಂತ್ರಸ್ತರು ನ್ಯಾಯಯುತ ಪರಿಹಾರಕ್ಕೆ 40 ವರ್ಷದಿಂದ ಹೋರಾಡುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರ ಎದುರು 890 ದಿನ ಅಹೋರಾತ್ರಿ ಧರಣಿ ನಡೆಸಿದ್ದಾರೆ. ಧರಣಿ ಹೂಡಿದ್ದ ಟೆಂಟ್‌ನಲ್ಲೇ ರೈತರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಪ್ರಾದೇಶಿಕ ಆಯುಕ್ತರ ನೇತೃತ್ವದ ಸಮಿತಿ ರಚಿಸಿದ ಬಳಿಕ ಧರಣಿ ಕೈಬಿಟ್ಟಿದ್ದರು. ಎರಡು ವರ್ಷ ಕಳೆದರೂ ಏನೂ ಬೆಳವಣಿಗೆ ಆಗಿಲ್ಲ. ಸಂತಸ್ರರು ಮತ್ತೆ ಡು ಆರ್ ಡೈ ಹೋರಾಟಕ್ಕೆ ಅಣಿಯಾಗಿದ್ದಾರೆ ಎಂದು ಗಮನ ಸೆಳೆದರು.

ಬೆಲ್ದಾಳೆ ಯತ್ನದಿಂದ ಸಿಎಂ ಸಭೆ

2024ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿದ್ದ ಚಳಿಗಾಲ ಅಧಿವೇಶನ ವೇಳೆ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅವರು ಶೂನ್ಯ ವೇಳೆಯಲ್ಲಿ ಕಾರಂಜಾ ಸಂತ್ರಸ್ತರ ಸಮಸ್ಯೆ ಪ್ರಸ್ತಾಪಿಸಿ ಗಮನ ಸೆಳೆದಿದ್ದರು. ಇವರು ಹೇಳಿದ್ದಕ್ಕಾಗಿಯೇ ಸಿಎಂ, ಡಿಸಿಎಂ ಅವರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳ ಜೊತೆಗೆ ಸಭೆ ನಡೆಸಿ, ಈ ಬಗ್ಗೆ ಏನು ಮಾಡಬಹುದು ಎಂಬ ಬಗ್ಗೆ ಚರ್ಚಿಸಿ ಸಲಹೆ ಪಡೆದಿದ್ದರು. ಬಳಿಕ ಕಲಬುರಗಿ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ (2025ರ ಏಪ್ರಿಲ್ 7ರಂದು) ಸಮಿತಿ ರಚಿಸಲಾಗಿತ್ತು. ಸಮಿತಿ ಈಗಾಗಲೇ ಸರ್ಕಾರಕ್ಕೆ ವರದಿಯೂ ಕೊಟ್ಟಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಅಪರ ಮುಖ್ಯ ಕಾರ್ಯದರ್ಶಿ ವರದಿ ಮೇಲೆ 2104ರಲ್ಲಿ ಸಂತ್ರಸ್ತರ ಪರಿಹಾರ ಬೇಡಿಕೆ ತಿರಸ್ಕರಿಸಲಾಗಿತ್ತು. ಕಾನೂನಿನ ಪ್ರಕಾರ ಪರಿಹಾರ ನೀಡಿದ್ದಾಗಿದೆ ಎಂಬ ಕಾರಣಕ್ಕೆ ಇದು ತಿರಸ್ಕರಿಸಲಾಗಿತ್ತು. ರೈತರ ಪ್ರತಿಭಟನೆ, ಸದನದಲ್ಲಿ ಶಾಸಕರ ಒತ್ತಡ ಕಾರಣಕ್ಕೆ ಇದರ ಮೇಲೆ ಸರ್ಕಾರ ಮರು ಪರಿಶೀಲನೆ ನಡೆಸಿದೆ ಎಂದರು.

60 ಸಾವಿರ ರೈತರ
ಸಂಕಷ್ಟ ನಿವಾರಿಸಿ

ಕಾರಂಜಾ ಯೋಜನೆಯಡಿ 28 ಗ್ರಾಮಗಳು ಮುಳುಗಡೆಯಾಗಿವೆ.9 ಗ್ರಾಮ ಪುನರ್ವಸತಿಯಾಗಿವೆ. ತಮ್ಮ ಬೆಲೆಬಾಳುವ, ಅತಿ ಫಲವತ್ತಾದ 24 ಸಾವಿರ ಎಕರೆ ಜಮೀನು ರೈತರು ಕೊಟ್ಟಿದ್ದಾರೆ. ಇವರಿಗೆ 3–4 ಸಾವಿರ ಪರಿಹಾರ ನೀಡಲಾಗಿದೆ! ಭೂಮಿ ಕಳೆದುಕೊಂಡ 60 ಸಾವಿರ ರೈತರು ಸಂಕಷ್ಟದಲ್ಲಿದ್ದಾರೆ. ಅನೇಕರು ಆಂಧ್ರ, ಮಹಾರಾಷ್ಟ್ರ, ತೆಲಂಗಾಣ ಇತರೆಡೆ ಹೊಟ್ಟೆಪಾಡಿಗೆ ಗುಳೆ ಹೋಗಿದ್ದಾರೆ. ಅನೇಕ ಕುಟುಂಬ ಬೀದಿಗೆ ಬಿದ್ದಿವೆ. ಪರಿಹಾರದಲ್ಲಾದ ಅನ್ಯಾಯ ಬಗ್ಗೆ 1990ರಲ್ಲಿ ಕೆಲವರು ಕೋರ್ಟ್ಗೆ ಹೋಗಿದ್ದರು. 2015 ರಲ್ಲಿ ಇದರ ಆದೇಶವಾಗಿದೆ. ಬಾಪುರ, ಖೇಣಿರಂಜೋಳ, ನೀಡವಂಚಾ, ಬೊಂಬಳಗಿ, ರೇಕುಳಗಿ ಇತರೆ ಗ್ರಾಮದ ಕೆಲವರಿಗೆ ಬಡ್ಡಿಸಹಿತ ಎಕ್ರೆಗೆ 15 ಲಕ್ಷ ರೂ. ಪರಿಹಾರ ಬಂದಿದೆ. ಸರ್ಕಾರ ವಿಶೇಷ ಪ್ಯಾಕೇಜ್ ಕೊಟ್ಟು, ತೀರ ಬಡ ಸಂತಸ್ತರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವಂತೆ ಡಾ.ಶೈಲೇಂದ್ರ ಬೆಲ್ದಾಳೆ ಆಗ್ರಹಿಸಿದರು. ಸರ್ಕಾರ ಕಾನೂನು ಚೌಕಟ್ಟಿನಲ್ಲೇ ಹೆಜ್ಜೆ ಇಡಬೇಕಾಗುತ್ತದೆ. ನಮ್ಮ ಸರ್ಕಾರ ರೈತರ ಪರವಾಗಿ ಇದೆ. ಯುಕೆಪಿನಲ್ಲಿ ಕಾನೂನಿನ ಪ್ರಕಾರ ಪರಿಹಾರ ಕೊಟ್ಟಿದ್ದೇವೆ. ಕಾರಂಜಾ ಸಂತ್ರಸ್ತರ ಪರಿಹಾರ ಸಂಬಂಧ ಪ್ರಾದೇಶಿಕ ಆಯುಕ್ತರ ವರದಿ ಮೇಲೆ ವಿವಿಧ ಇಲಾಖೆಯವರು ಅಭಿಪ್ರಾಯ ತಿಳಿಸಲಿ. ಮುಂದಿನ ಬಗ್ಗೆ ಆಶಾಭಾವ ಹೊಂದೋಣ.

–ಪ್ರಿಯಾಂಕ್ ಖರ್ಗೆ
ಸಚಿವ

# ರಾಷ್ಟ್ರಮಟ್ಟದ ಸಾಧನೆ: ನವದೆಹಲಿಯಲ್ಲಿ ನಡೆದ ಅಖಿಲ ಭಾರತ ನಾಗರಿಕ ಸೇವಾ ಸ್ಪರ್ಧೆಯಲ್ಲಿ ಬೀದರ್ ತಂಡಕ್ಕೆ ಪ್ರಶಸ್ತಿ

**ಬೀದರ್: ಮಾ.26:**ನವದೆಹಲಿಯಲ್ಲಿ ಜರುಗಿದ 2025–26ನೇ ಸಾಲಿನ ಅಖಿಲ ಭಾರತ ನಾಗರಿಕ ಸೇವಾ ಸಂಗೀತ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದ ಬೀದರ ಜಿಲ್ಲೆಯ ಸರ್ಕಾರಿ ನೌಕರರ ತಂಡವು ಜಾನಪದ ಸಮೂಹ ಗಾಯನ ವಿಭಾಗದಲ್ಲಿ ರಾಷ್ಟ್ರಮಟ್ಟದ ಮೂರನೇ ಸ್ಥಾನದೊಂದಿಗೆ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಅಪಾರ ಕೀರ್ತಿ ತಂದಿದೆ.

ಸತತ ಪರಿಶ್ರಮಕ್ಕೆ ಸಂದಜಯ: ಶಿಕ್ಷಣ ಇಲಾಖೆಯ ಶಿಕ್ಷಕಿ ಭಾನುಪ್ರಿಯಾ ಅರಳಿ ಅವರ ಸಮರ್ಥ ನೇತೃತ್ವದ ಈ ತಂಡವು, ಕಳೆದ ಮೇ 2025 ರಲ್ಲಿ ಶಿವಮೊಗ್ಗದಲ್ಲಿ ನಡೆದ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿತ್ತು . ಕಳೆದ ವರ್ಷವೂ ಬಿಹಾರದ ಪಾಟ್ನಾದಲ್ಲಿ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಈ ತಂಡವು, ಬೀದರ್ ಜಿಲ್ಲೆಯ ಇತಿಹಾಸದಲ್ಲೇ ಸತತ ಎರಡು ಬಾರಿ ರಾಜ್ಯವನ್ನು ಪ್ರತಿನಿಧಿಸಿದ ಮೊದಲ ತಂಡ ಎಂಬ ಐತಿಹಾಸಿಕ ದಾಖಲೆ ನಿರ್ಮಿಸಿದೆ.

ಪ್ರಶಸ್ತಿ ವಿಜೇತ ತಂಡದ ಸದಸ್ಯರು: ಈ ಯಶಸ್ವಿ ತಂಡದಲ್ಲಿ ಶಿಕ್ಷಣ ಇಲಾಖೆಯ ಭಾನುಪ್ರಿಯಾ ಅರಳಿ, ದೀಪಾ ಕಿರಣ್, ಮನೋಹರ್ ಎಂ..ಎಸ್., ರೇಣುಕಾ ಕೋಟೆ, ಮಲ್ಲಮ್ಮ ದಿಗಂಬರ್, ಪ್ರಣೀತಾ ಕೋರೆ, ಚಂದ್ರಕಾಂತ ದಂಡೆ ಹಾಗೂ ಆರೋಗ್ಯ ಇಲಾಖೆಯ ಶಿವಪ್ಪ ಅವರು ಸದಸ್ಯರಾಗಿದ್ದಾರೆ. ಇವರಿಗೆ ಭಾಗ್ಯಲಕ್ಷ್ಮಿ ಗುರುಮೂರ್ತಿ ಅವರು ಮಾರ್ಗದರ್ಶಕರಾಗಿ ಸಾಥ್ ನೀಡಿದ್ದರು.

ಸವಿಗಾನ ಸಂಗೀತದ ಸವಿ: ತಮ್ಮ ಹವ್ಯಾಸಕ್ಕಾಗಿ 'ಸವಿಗಾನ ಸಂಗೀತ' ತಂಡವನ್ನು ರಚಿಸಿಕೊಂಡಿರುವ ಈ ನೌಕರರು, ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಪ್ರಮುಖ ಕಾರ್ಯಕ್ರಮಗಳಲ್ಲಿ ನಾಡಗೀತೆ ಮತ್ತು ಸಂಗೀತ ಸೇವೆ ನೀಡುವ ಮೂಲಕ ಜಿಲ್ಲೆಯಾದ್ಯಂತ ಪರಿಚಿತರಾಗಿದ್ದಾರೆ. ವೃತ್ತಿ ಜೀವನದ ಜವಾಬ್ದಾರಿಗಳ ನಡುವೆಯೂ ಕಲೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಇವರು ತೋರುತ್ತಿರುವ ಆಸಕ್ತಿ ಮತ್ತು ರಾಷ್ಟ್ರಮಟ್ಟದ ಈ ಸಾಧನೆಯನ್ನು ಸಾರ್ವಜನಿಕರು ಹಾಗೂ ಜಿಲ್ಲಾಡಳಿತ ಶ್ಲಾಘಿಸಿದೆ.

ಬೀದರ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ಇದೊಂದು ಅಪರೂಪದ ದಾಖಲೆ.ಸಾಮಾನ್ಯವಾಗಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಳ್ಳುವುದೇ ಕಷ್ಟವಿರುವಾಗ, ಈ ತಂಡವು ಸತತ ಎರಡು ಬಾರಿ ಕರ್ನಾಟಕವನ್ನು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿದೆ. ಈ ಸಾಧನೆ ಮಾಡಿದ ಜಿಲ್ಲೆಯ ಮೊದಲತಂಡ ಎಂಬ ಹೆಗ್ಗಳಿಕೆ ಇವರದ್ದಾಗಿದೆ.

2. ವೃತ್ತಿ ಮತ್ತು ಪ್ರವೃತ್ತಿಯ ಸಮನ್ವಯ

ಈ ತಂಡದ ವಿಶೇಷತೆಯೆಂದರೆ ಇದರಲ್ಲಿರುವವರೆಲ್ಲರೂ ಬಿಡುವಿಲ್ಲದ ಸರ್ಕಾರಿ ನೌಕರರು:

 ಶಿಕ್ಷಣ ಇಲಾಖೆ: ಭಾನುಪ್ರಿಯಾ ಅರಳಿ ಸೇರಿದಂತೆ ಏಳು ಸದಸ್ಯರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಶಾಲಾ ಮಕ್ಕಳಿಗೆ ಪಾಠ ಮಾಡುವುದರ ಜೊತೆಗೆ, ಚುನಾವಣೆ ಹಾಗೂ



ಜನಗಣತಿಯಂತಹ ರಾಷ್ಟ್ರೀಯ ಕಾರ್ಯಗಳಲ್ಲಿಯೂ ತೊಡಗಿಸಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ.

 ಆರೋಗ್ಯ ಇಲಾಖೆ: ಶಿವಪ್ಪ ಅವರು ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಕರ್ತವ್ಯದ ಒತ್ತಡದ ನಡುವೆಯೂ ಸಂಜೆ ಅಥವಾ ರಜಾ ದಿನಗಳಲ್ಲಿ ಅಭ್ಯಾಸ ನಡೆಸಿ ಈ ಸಾಧನೆ ಮಾಡಿರುವುದು ಇತರ ನೌಕರರಿಗೆ ಪ್ರೇರಣೆಯಾಗಿದೆ.

3. 'ಸವಿಗಾನ ಸಂಗೀತ' ತಂಡದ ಪ್ರಭಾವ

ಇವರು ಕೇವಲ ಸ್ಪರ್ಧೆಗಾಗಿ ಸೇರಿದವರಲ್ಲ. ಇವರು 'ಸವಿಗಾನ ಸಂಗೀತ' ಎಂಬ ತಂಡವನ್ನು ಕಟ್ಟಿಕೊಂಡು ಬೀದರ್ನ ಜಿಲ್ಲಾ ಮಟ್ಟದ ಕಾರ್ಯಕ್ರಮಗಳಲ್ಲಿ, ರಾಷ್ಟ್ರೀಯ ಹಬ್ಬಗಳಲ್ಲಿ ಹಾಗೂ ಸರ್ಕಾರಿ ಸಮಾರಂಭಗಳಲ್ಲಿ ಸಕ್ರಿಯವಾಗಿ ಸಂಗೀತ ಸೇವೆ ನೀಡುತ್ತಾ ಬಂದಿದ್ದಾರೆ. ಇವರನ್ನು ಜಿಲ್ಲೆಯಲ್ಲಿ 'ನಾಡಗೀತೆಗಳ ತಂಡ' ಎಂದೇ ಅಭಿಮಾನದಿಂದ ಕರೆಯಲಾಗುತ್ತದೆ.

4. ಸ್ಪರ್ಧೆಯ ತೀವ್ರತೆ

–ಅಖಿಲ ಭಾರತ ನಾಗರಿಕ ಸೇವಾ ಸ್ಪರ್ಧೆ: ಇದು ದೇಶದಾದ್ಯಂತ ಇರುವ ಎಲ್ಲಾ ರಾಜ್ಯಗಳ ಸರ್ಕಾರಿ ನೌಕರರಿಗಾಗಿ ಕೇಂದ್ರ ಸರ್ಕಾರ ಆಯೋಜಿಸುವ ಪ್ರತಿಷ್ಠಿತ ಸ್ಪರ್ಧೆ.

–ಜಾನಪದ ಸಮೂಹ ಗಾಯನ: ಈ ವಿಭಾಗದಲ್ಲಿ ಆಯ್ಕೆಯಾದ ಹಾಡುಗಳು ನಾಡಿನ ಸಂಸ್ಕೃತಿಯನ್ನು ಬಿಂಬಿಸಬೇಕಿರುತ್ತದೆ. ನಮ್ಮ ನಾಡಿನ ಜನಪದ ಸೊಗಡನ್ನು ದೆಹಲಿಯ ವೇ ದಿಕೆಯ ಮೇಲೆ ಸಮರ್ಥವಾಗಿ ಪ್ರಸ್ತುತ ಪಡಿಸಿರುವುದು ಶ್ಲಾಘನೀಯ.

5. ಹಿಂದಿನ ಸಾಧನೆಗಳ ಸ್ಮರಣೆ

ಕಳೆದ ವರ್ಷ ಬಿಹಾರದ ಪಾಟ್ನಾದಲ್ಲಿ ಭಾಗವಹಿಸಿದ್ದ ಅನುಭವ ಇವರಿಗೆ ಈ ಬಾರಿ ದೆಹಲಿಯಲ್ಲಿ ಪ್ರಶಸ್ತಿಗೆಲ್ಲಲು ಸಹಕಾರಿಯಾಯಿತು. ತಂಡದ ಮಾರ್ಗದರ್ಶಕರಾಗಿ ಭಾಗ್ಯಲಕ್ಷ್ಮಿ ಗುರುಮೂರ್ತಿ ತಂಡಕ್ಕೆ ಸಾಥ್ ನೀಡಿದರು.

ಅಭಿನಂದನೆಗಳು: ರಾಷ್ಟ್ರಮಟ್ಟದಲ್ಲಿ ಜಿಲ್ಲೆಯ ಕೀರ್ತಿ ಪತಾಕೆ ಹಾರಿಸಿದ ಈ ನೌಕರರ ತಂಡಕ್ಕೆ ಬೀದರ್ ಜಿಲ್ಲಾಡಳಿತ, ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.. ವೃತ್ತಿಪರ ಕರ್ತವ್ಯದ ಜೊತೆಗೆ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಇವರ ಪ್ರಯತ್ನ ಇತರ ನೌಕರರಿಗೆ ಮಾದರಿಯಾಗಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE